# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಮಾರ್ಚ್ 22, 2022

ಸಂಪುಟ : 48 ಸಂಚಿಕೆ : 311 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com






ನವೀನ್ ಪಾರ್ಥೀವ ಶರೀರಕ್ಕೆ ಚಳಗೇರಿಯಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ ಅಂತಿಮ ನಮನ ಸಲ್ಲಿಸಿದರು. ನಂತರ ಮುಖ್ಯಮಂತ್ರಿಗಳು ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಹರಿಹರದ ಶ್ರೀ ವಚನಾನಂದ ಸ್ವಾಮೀಜಿ ಅವರು ನವೀನ್ ಕುಟುಂಬದವರೊಡನೆ ಸಮಾಲೋಚನೆ ನಡೆಸಿದರು. ಈ ಸಂದರ್ಭದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ್ ಹಾಗೂ ಇತರರು ಇದ್ದರು.

# ಸ್ವಗ್ರಾಮ ಚಳಗೇರಿಗೆ ನವೀನ್ ಪಾರ್ಥಿವ ಶರೀರ

## ಅಂತಿಮ ಧಾರ್ಮಿಕ ವಿಧಿ ವಿಧಾನ ನೆರವೇರಿಸಿ, ಎಸ್.ಎಸ್. ಆಸ್ಪತ್ರೆಗೆ ದೇಹದಾನ ಮಾಡಿದ ಪೋಷಕರು

ರಾಣೇಬೆನ್ನೂರು, ಮಾ.21- ರಷ್ಯಾ-ಉಕ್ರೇನ್ ಸಂಘರ್ಷದಲ್ಲಿ ಕಳೆದ ಮಾ.1ರಂದು ಮಡಿದ ವೈದ್ಯಕೀಯ ವಿದ್ಯಾರ್ಥಿ ಚಳಗೇರಿಯ ನವೀನ್ ಪಾರ್ಥಿವ ಶರೀರವನ್ನು ಸಹೋದರ ಬೆಂಗಳೂರಿನಿಂದ ಇಂದು ಬೆಳಗ್ಗೆ ಹುಟ್ಟೂರಿಗೆ ತಂದರು. ವೀರಶೈವ ಸಂಪ್ರದಾಯದಂತೆ ಅಂತಿಮ ಧಾರ್ಮಿಕ ವಿಧಿ-ವಿಧಾನಗಳನ್ನ ನೆರವೇರಿಸಿ, ಸಾರ್ವಜನಿಕರ ಅಂತಿಮ ದರ್ಶನಕ್ಕೆ ಇಡಲಾಯಿತು.

ಬೆಳಿಗ್ಗೆ 3 ಗಂಟೆಗೆ ಬಂದ ಮೃತದೇಹವನ್ನು ಬೆಂಗಳೂರಿನ ವಿಮಾನ ನಿಲ್ದಾಣದಲ್ಲಿ ಬರಮಾಡಿಕೊಂಡ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, 11 ಗಂಟೆಗೆ ಚಳಗೇರಿಗೆ ಬಂದು ಅಂತಿಮ ದರ್ಶನ ಪಡೆದರು. ಜೊತೆಗೆ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಮ ಹೆಬ್ಬಾರ, ಸಂಸದರಾದ ಸಿದ್ದೇಶ್ವರ ಹಾಗೂ ಶಿವಕುಮಾರ ಉದಾಸಿ, ಶಾಸಕರಾದ ಅರುಣಕುಮಾರ ಪೂಜಾರ, ವಿರುಪಾಕ್ಷಪ್ಪ ಬಳ್ಳಾರಿ, ರೇಣುಕಾಚಾರ್ಯ ಮತ್ತಿತರರಿದ್ದರು.

ಮುಖ್ಯಮಂತ್ರಿಗಳು, ಅಂತಿಮ ದರ್ಶನಕ್ಕೆ ಆಗಮಿಸಿದ್ದ ತರಳಬಾಳು ಜಗದ್ಗುರು ಡಾ: ಶಿವಮೂರ್ತಿ ಶಿವಾಚಾರ್ಯ ಶ್ರೀಗಳು ಹಾಗೂ ಹರಿಹರ ಪಂಚಮಸಾಲಿ ಜಗದ್ಗುರು ವಚನಾನಂದ ಶ್ರೀಗಳು, ನವೀನ್ ತಂದೆ, ತಾಯಿ, ಸಹೋದರ ಮತ್ತು ರಾಜ್ಯದ ವಿವಿಧೆಡೆಯಿಂದ ಆಗಮಿಸಿದ್ದ ನವೀನ್ ಸಹಪಾಠಿ ವಿದ್ಯಾರ್ಥಿಗಳ ಹಾಗೂ ನವೀನ್ ಕುಟುಂಬದ ಭವಿಷ್ಯದ ಬಗ್ಗೆ ಸುಮಾರು 40 ನಿಮಿಷಗಳ ಕಾಲ ಚರ್ಚಿಸಿ ಸಲಹೆ, ಸೂಚನೆಗಳನ್ನು ಪಡೆದುಕೊಂಡರು.

ಬೆಳಿಗ್ಗೆ 8-50 ಕ್ಕೆ ಚಳಗೇರಿಗೆ ಬಂದ ಕಳೇಬರಕ್ಕೆ ವೀರಶೈವ ಸಂಪ್ರದಾಯದಂತೆ ಧಾರ್ಮಿಕ ವಿಧಿ ವಿಧಾನಗಳನ್ನ ನೆರವೇರಿಸಿದ ಬಳಿಕ, ಸಾರ್ವಜನಿಕರ ದರ್ಶನಕ್ಕೆ ಅವಕಾಶ ನೀಡಲಾಯಿತು. ಮದ್ಯಾಹ್ನ ಗ್ರಾಮದಾದ್ಯಂತ ಮೆರವಣಿಗೆ ಮಾಡಿ ಮೊದಲೇ ನಿರ್ಧರಿಸಿದಂತೆ ದಾವಣಗೆರೆ ಎಸ್ ಎಸ್ ಆಸ್ಪತ್ರೆಗೆ ದೇಹದಾನ ಮಾಡಲಾಯಿತು. ಆಸ್ಪತ್ರೆ ಪ್ರಾಚಾರ್ಯ ಡಾ.ಪ್ರಸಾದ, ಡಾ. ಜತ್ತಿ ಅವರು ದೇಹವನ್ನು ಪಡೆದರು.

ಕಾಂಗ್ರೆಸ್‌ನ ಕೆ.ಬಿ.ಕೋಳಿವಾಡ, ರುದ್ರಪ್ಪ ಲಮಾಣಿ, ಡಿ.ಆರ್. ಪಾಟೀಲ, ಕೊಟ್ರೇಶ ಬಸೇಗಣ್ಣಿ, ಎಂ.ಎಂ. ಹಿರೇಮಠ, ಎಸ್.ಎಫ್.ಎನ್. ಗಾಜಿಗೌಡ್ರ, ಬಿಜೆಪಿ ಯ ಎಸ್.ಎಸ್. ರಾಮಲಿಂಗಣ್ಣನವರ, ಭಾರತಿ ಜಂಬಗಿ, ಡಾ. ಬಸವರಾಜ ಕೇಲಗಾರ, ಸಂತೋಷ ಪಾಟೀಲ, ಯು.ಬಿ.ಬಣಕಾರ, ಪರಮೇಶ ಮೇಗಳಮನಿ ಮತ್ತಿತರರು ಅಂತಿಮ ದ್ರಶನ ಪಡೆದರು.

**ಶೇಖರಗೌಡ ಮನವಿ:** ತಮ್ಮ ಮಗ ನವೀನ್ ಜೊತೆ ಕಲಿಯುತ್ತಿದ್ದವರು ಹಾಗೂ ರಾಜ್ಯದ ಇತರೆ ವಿದ್ಯಾರ್ಥಿಗಳು ಉಕ್ರೇನ್‌ನಲ್ಲಿನ ಭಯಂಕರ ಪರಿಸ್ಥಿತಿಯನ್ನು (3ನೇ ಪುಟಕ್ಕೆ)

### ಅರ್ಧ ಭೂಮಿ ಸುತ್ತಿ ಬಂದ ಮೃತದೇಹ

**ದಾವಣಗೆರೆ, ಮಾ. 21 - ರಾಣೇಬೆನ್ನೂರಿನ ಚಳಗೇರಿಯ ನವೀನ್ ಶೇಖರಗೌಡ ಅವರ ಪಾರ್ಥಿವ ಶರೀರವನ್ನು ಉಕ್ರೇನ್‌ನಿಂದ ಪೋಲ್ಯಾಂಡ್‌ಗೆ ತೆಗೆದುಕೊಂಡು ಹೋಗಿ, ಅಲ್ಲಿಂದ ದುಬೈಗೆ ರವಾನಿಸಿ, ಅಲ್ಲಿಂದ ಬೆಂಗಳೂರಿಗೆ ತರಲಾಯಿತು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.**

**ಮೃತದೇಹ ಸಂರಕ್ಷಿಸಿ ತರುವಲ್ಲಿ ವಹಿಸಲಾದ ಶ್ರಮದ ಬಗ್ಗೆ ಪತ್ರಕರ್ತರೊಂದಿಗೆ ಮಾತನಾಡಿರುವ ಅವರು, ಮಾರ್ಚ್ 1ರಂದು ಸಾವು ಸಂಭವಿಸಿದ ಬಗ್ಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನನ್ನ ಜೊತೆ ಹಾಗೂ ಕುಟುಂಬದವರ ಜೊತೆ ಮಾತನಾಡಿದ್ದರು. ನಂತರ ವಿದೇಶಾಂಗ ಸಚಿವಾಲಯ ಹಾಗೂ ಪ್ರಧಾನ ಮಂತ್ರಿ ಕಚೇರಿ ಜೊತೆ ನಿರಂತರ ಸಂಪರ್ಕ ಹೊಂದಲಾಗಿತ್ತು ಎಂದರು. ವಿದೇಶಾಂಗ ಸಚಿವ ಜೈಶಂಕರ್ ಅವರು ಉಕ್ರೇನ್‌ನಲ್ಲಿರುವ ಭಾರತದ ರಾಯಭಾರಿ ಅಧಿಕಾರಿಗಳ ಜೊತೆ ಮಾತನಾಡಿ,** (2ನೇ ಪುಟಕ್ಕೆ)

# ವೈದ್ಯಕೀಯ ಶಿಕ್ಷಣ ವೆಚ್ಚ ಕಡಿಮೆ ಮಾಡಲು ಕ್ರಮ

ದಾವಣಗೆರೆ, ಮಾ. 21 - ದೇಶದಲ್ಲಿ ವೈದ್ಯಕೀಯ ಶಿಕ್ಷಣ ವೆಚ್ಚ ಹೆಚ್ಚಾಗಿರುವ ಕಾರಣ ವಿದ್ಯಾರ್ಥಿಗಳು ವಿದೇಶಕ್ಕೆ ಹೋಗುತ್ತಿದ್ದಾರೆ. ಇದನ್ನು ತಡೆಯಲು ವೈದ್ಯಕೀಯ ಶಿಕ್ಷಣ ವೆಚ್ಚ ಕಡಿಮೆ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳಲು ಮುಂದಾಗಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಉಕ್ರೇನ್ ಸಮರದಲ್ಲಿ ಸಾವನ್ನಪ್ಪಿದ ರಾಣೇಬೆನ್ನೂರು ತಾಲ್ಲೂಕು ಚಳಗೇರಿಯ ನವೀನ್ ಶೇಖರಗೌಡ ಅವರ ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳಲು ತೆರಳುವ ವೇಳೆ ನಗರದ ಜಿ.ಎ.ಐ.ಟಿ. ಹೆಲಿಪ್ಯಾಡ್‌ನಲ್ಲಿ ತಮ್ಮನ್ನು ಭೇಟಿಯಾದ ಪತ್ರಕರ್ತರೊಂದಿಗೆ ಅವರು ಮಾತನಾಡುತ್ತಿದ್ದರು.

ದೇಶದಲ್ಲಿ ಸರ್ಕಾರಿ ವೈದ್ಯಕೀಯ ಸೀಟುಗಳ ವೆಚ್ಚ ಕಡಿಮೆ ಇದೆ. ಆದರೆ, ಪಿ.ಯು.ಸಿ.ಯಲ್ಲಿ ಶೇ.90-95ರಷ್ಟು ಅಂಕ ಪಡೆದವರಿಗೂ, ನೀಟ್ ಮೂಲಕ ಸರ್ಕಾರಿ ಸೀಟು ಸಿಗುತ್ತಿಲ್ಲ. ಮ್ಯಾನೇಜ್‌ಮೆಂಟ್ ಹಾಗೂ ಎನ್‌ಆರ್‌ಐ ಸೀಟುಗಳ ವೆಚ್ಚ ಹೆಚ್ಚಾಗಿರುವ ಕಾರಣ (2ನೇ ಪುಟಕ್ಕೆ)



### ಮೋದಿ ವರ್ಚಸ್ಸು ಹಾಗೂ ಭಗೀರಥ ಯತ್ನದಿಂದ ವಿದ್ಯಾರ್ಥಿಗಳು ವಾಪಸ್

**ಉಕ್ರೇನ್ ಸಮರ ಭೂಮಿಯಿಂದ ವಿದ್ಯಾರ್ಥಿಗಳನ್ನು ಕರೆ ತಂದ ಬಗ್ಗೆ ಸಿಎಂ ವಿವರಣೆ**

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ವರ್ಚಸ್ಸು ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೊಂದಿರುವ ಒಳ್ಳೆಯ ಸಂಬಂಧಗಳಿಂದಾಗಿ ಭಗೀರಥ ಯತ್ನ ನಡೆಸಿದ್ದರ ಪರಿಣಾಮ 19 ಸಾವಿರ ವಿದ್ಯಾರ್ಥಿಗಳನ್ನು ವಾಪಸ್ ಕರೆ ತರಲು ಸಾಧ್ಯವಾಗಿದೆ. ಇದೊಂದು ಭಗೀರಥ ಯತ್ನ. ಅಮೆರಿಕದಂತಹ ದೇಶ ಸಹ ತನ್ನ (2ನೇ ಪುಟಕ್ಕೆ)

# ಮೂರು ಕೃಷಿ ಕಾಯ್ದೆಗಳ ಸಂಪೂರ್ಣ ವಾಪಸಾತಿಗೆ ಸುಪ್ರೀಂ ಸಮಿತಿ ವಿರೋಧ

**ಬೆಂಬಲ ಬೆಲೆ ಖರೀದಿಯಲ್ಲಿ ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ನೀಡಲು ಶಿಫಾರಸ್ಸು**

ನವದೆಹಲಿ, ಮಾ. 21 – ಕೃಷಿ ಕಾಯ್ದೆಗಳ ಕುರಿತು ಸುಪ್ರೀಂ ಕೋರ್ಟ್ ನಿಂದ ನೇಮಿಸಲಾಗಿದ್ದ ಸಮಿತಿ, ಮೂರು ಕೃಷಿ ಕಾಯ್ದೆಗಳನ್ನು ಸಂಪೂರ್ಣವಾಗಿ ವಾಪಸ್ ಪಡೆಯುವುದನ್ನು ವಿರೋಧಿ ಸಿತ್ತು. ಆದರೆ, ಸರ್ಕಾರ ಈಗಾಗಲೇ ಕಾಯ್ದೆಗಳನ್ನು ವಾಪಸ್ ಪಡೆದಿರುವು ದರಿಂದ ಈ ವರದಿ ಅರ್ಥಹೀನವಾಗಿದೆ.

ಕೃಷಿ ಕಾಯ್ದೆಗಳನ್ನು ಸಂಪೂರ್ಣವಾಗಿ ವಾಪಸ್ ಪಡೆಯುವ ಬದಲು, ಇಳುವರಿ ಖರೀದಿಸುವುದನ್ನು ರಾಜ್ಯಗಳಿಗೆ ಬಿಡ ಬೇಕು ಎಂದೂ ಸಮಿತಿ ಹೇಳಿದೆ.

ಪುಣೆಯ ರೈತ ಮುಖಂಡ ಅನಿಲ್ ಘನ್ವತ್ ಅವರು ಸಮಿತಿಯ ಸದಸ್ಯರಾಗಿದ್ದರು. ಸುಪ್ರೀಂ ಕೋರ್ಟ್ ವರದಿ ಬಿಡುಗಡೆ ಮಾಡುವಂತೆ ಅವರು (2ನೇ ಪುಟಕ್ಕೆ)

# ವಿಭಜನೆಗಿಂತ ಒಗ್ಗೂಡಿಸುವ ಬಸವ ತತ್ವ ಅಗತ್ಯ



**ಬಸವ ಮಂಟಪ ಕಟ್ಟಡ ಪೂಜೆಯಲ್ಲಿ ಮುರುಘಾ ಶರಣರ ಅಭಿಮತ**

ಮಲೇಬೆನ್ನೂರು, ಮಾ.21- ಡಾ.ಬಿ.ಆರ್. ಅಂಬೇಡ್ಕರ್ ಅವರು ನೀಡಿದ ಸಂವಿಧಾನದಲ್ಲಿ ಬಸವಣ್ಣನವರ ಆಶಯಗಳು ಅಡಕವಾಗಿದ್ದು, ವಚನ ಸಂವಿಧಾನ ನಮ್ಮೆಲ್ಲರ ಜೀವನದ ವಿಧಾನವಾಗಿದೆ ಎಂದು ಡಾ.ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಸೋಮವಾರ ಪಟ್ಟಣದ ಡಾ.ರಾಜ್ ಕುಮಾರ್ ಬಡಾವಣೆಯಲ್ಲಿ ಬಸವ ಬಳಗ ಮತ್ತು ಅಕ್ಕನ ಬಳಗ ಸೇವಾ ಸಂಸ್ಥೆ ವತಿಯಿಂದ ದಾನಿಗಳ ನೆರವಿನಿಂದ 'ಬಸವ ಮಂಟಪ' ಕಟ್ಟಡ ನಿರ್ಮಾಣದ ಭೂಮಿ ಪೂಜೆ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಶರಣರು ಆಶೀರ್ವಚನ ನೀಡಿದರು.

ನಮ್ಮ ರಾಷ್ಟ್ರದ ಸಂವಿಧಾನ ಎಲ್ಲಾ ಜನರ ಆಶಯಗಳನ್ನು ಹೊಂದಿರುವಂತೆ, ಬಸವಣ್ಣ ಸೇರಿದಂತೆ 12ನೇ ಶತಮಾನದ ಎಲ್ಲಾ ಶರಣ-ಶರಣೆಯರು ತಮ್ಮ ವಚನಗಳ ಮೂಲಕ ಎಲ್ಲರ ಬದುಕಿಗೆ ಉತ್ತಮ ಮಾರ್ಗದರ್ಶನ ನೀಡಿದ್ದರು. ವಚನಗಳ ಮುಖಾಂತರ ನಮ್ಮ ಜೀವನವನ್ನು ಅನಾವರಣ ಮಾಡಿಕೊಳ್ಳುವ ಸಂದರ್ಭವನ್ನು ಮತ್ತೆ ಮತ್ತೆ ತಂದು ಕೊಳ್ಳಬೇಕು. ಇನ್ನೂ ಬಹಳಷ್ಟು ಜನ ಬಸವ (4ನೇ ಪುಟಕ್ಕೆ)

### ಹಿಜಾಬ್ : ಗೈರಾದವರಿಗೆ ಪರೀಕ್ಷೆ ಇಲ್ಲ

ಬೆಂಗಳೂರು, ಮಾ.21- ಹಿಜಾಬ್ ವಿವಾದದ ಹಿನ್ನೆಲೆಯಲ್ಲಿ ಪರೀಕ್ಷೆಗೆ ಗೈರಾದವರಿಗೆ ಮರು ಪರೀಕ್ಷೆ ನಡೆಸುವುದಿಲ್ಲ ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿದ್ದಾರೆ.

ಈ ಪರೀಕ್ಷೆಗಳು ಸ್ಪರ್ಧಾತ್ಮಕವಾಗಿವೆಯೇ ಹೊರತು, ಮಾನವೀಯ ಪರೀಕ್ಷೆಗಳಲ್ಲ. ಗೈರಾದವರಿಗೆ ಪ್ರತ್ಯೇಕ ವ್ಯವಸ್ಥೆ ಮಾ ಡ (4ನೇ ಪುಟಕ್ಕೆ)

### ಮುಸ್ಲಿಂ ಕುಟುಂಬದಿಂದ ದೇವಾಲಯಕ್ಕೆ ಜಮೀನು ದಾನ

ಪಾಟ್ನಾ, ಮಾ. 21 – ಬಿಹಾರದ ಪೂರ್ವ ಚಂಪಾರಣ್ಯ ಜಿಲ್ಲೆಯ ಕೈಥವಾಲಿಯಾದಲ್ಲಿ ವಿಶ್ವದ ಅತಿ ದೊಡ್ಡ ವಿರಾಟ ರಾಮಾಯಣ ಮಂದಿರ ನಿರ್ಮಾಣಕ್ಕಾಗಿ ಮುಸ್ಲಿಮ್ ಕುಟುಂಬವೊಂದು 2.5 ಕೋಟಿ ರೂ.ಗಳ ಜಮೀನು ದಾನ ಮಾಡಿದೆ. ಬೃಹತ್ ಮಂದಿರ ನಿರ್ಮಾಣ ಕಾರ್ಯ ಕೈಗೊಂಡಿರುವ (4ನೇ ಪುಟಕ್ಕೆ)




ದಿನಾಂಕ : 22.03.2022ನೇ ಮಂಗಳವಾರದಿಂದ 26.03.2022ರ ಶನಿವಾರದವರೆಗೆ ಹರಿಹರದಲ್ಲಿ ನಡೆಯಲಿರುವ

(2ನೇ ಪುಟಕ್ಕೆ)

ಗ್ರಾಮದೇವತೆ ಊರಮ್ಮ ದೇವಿ

ಶ್ರೀ ಗ್ರಾಮದೇವತೆ ಜಾತ್ರಾ ಮಹೋತ್ಸವಕ್ಕೆ


ಆಗಮಿಸುತ್ತಿರುವ ಸರ್ವ ಭಕ್ತಾದಿಗಳಿಗೂ KGK ರಿಯಲ್ ಎಸ್ಟೇಟ್ಸ್ ಹಾಗೂ KGK ಬ್ರಿಕ್ಸ್ ಇವರಿಂದ ಆದರದ ಸುಸ್ವಾಗತ



ಕೆ.ಜಿ. ಷಣ್ಮುಖ, (ಗುತ್ತೆಪ್ಪ)
ಮಾಲೀಕರು,
ಕೆ.ಜಿ.ಕೆ. ಅರ್ತ್ ಮೂವರ್ಸ್
ಹರಿಹರ







ಸಾಯಿ ಗಿರೀಶ್ ಎಸ್. ಮೌರ್ಯ ಆರ್. ಮನೋಜ್ ಆರ್.



ಕೆ. ರವಿಚಂದ್ರ,
ಅಧ್ಯಕ್ಷರು, ಹರಿಹರ ತಾ. ರಿಯಲ್ ಎಸ್ಟೇಟ್ ಏಜೆಂಟ್ಸ್ ಅಂಡ್ ಡೆವಲಪರ್ಸ್ ಅಸೋಸಿಯೇಷನ್, ಶ್ರೀ ಹರಿಹರೇಶ್ವರ ಬ್ಯಾಂಕ್ ನಿರ್ದೇಶಕರು, ಹರಿಹರ.



॥ ಶ್ರೀ ಸಿದ್ದೇಶ್ವರ ಪ್ರಸನ್ನ ॥



ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ





ಜನನ:
11.08.1963

ಲಿಂಗೈಕ್ಯ :
15.03.2022

ದಾವಣಗೆರೆ ತಾಲ್ಲೂಕು ಹಳೇಬಾತಿ ಗ್ರಾಮದ ವಾಸಿ

ಶ್ರೀ ಹೆಚ್.ಎಂ. ಉಮಾಪತಯ್ಯ ಮತ್ತು ಮಕ್ಕಳು

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 15.03.2022ರ ಮಂಗಳವಾರ ಮಧ್ಯಾಹ್ನ 12.20ಕ್ಕೆ ನನ್ನ ಧರ್ಮಪತ್ನಿ

ಶ್ರೀಮತಿ ವನಿತ

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ಕೈಲಾಸ ಶಿವಗಣಾರಾಧನೆಯನ್ನು

ದಿನಾಂಕ 23.03.2022ನೇ ಬುಧವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ತಾಲ್ಲೂಕು ಹಳೇಬಾತಿ ಗ್ರಾಮದ ಮೃತರ ಸ್ವಗೃಹದಲ್ಲಿ

ನೆರವೇರಿಸಲು ಗುರು - ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

*ಇಂತಿ ದುಃಖತಪ್ತರು :*

ಶ್ರೀ ಹೆಚ್.ಎಂ. ಮರುಳಸಿದ್ದಯ್ಯ ಮತ್ತು ಸಹೋದರರು
ಶ್ರೀ ಹೆಚ್.ಎಂ. ಉಮಾಪತಯ್ಯ ಮತ್ತು ಮಕ್ಕಳು
ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು
ಮಠದ ವಂಶಸ್ಥರು, ಹಳೇಬಾತಿ ಹಾಗೂ ಬಂಧು-ಮಿತ್ರರು.

ಮೊಬೈಲ್: 98447 06560, 70195 73427

ವಿ.ಸೂ : ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಲು ಕೋರಿದೆ.

## ಭಗವದ್ಗೀತೆ ಅಳವಡಿಕೆ ಅಧ್ಯಯನಕ್ಕೆ ಸಮಿತಿ

ಬೆಂಗಳೂರು, ಮಾ. 21 - ಶಾಲಾ ಪಠ್ಯಕ್ರಮದಲ್ಲಿ ಭಗವದ್ಗೀತೆ ಅಳವಡಿಸುವ ಕುರಿತು ಅಧ್ಯಯನ ನಡೆಸಲು ಸಮಿತಿಯೊಂದನ್ನು ರಚಿಸಲಾಗುವುದು, ಬಳಿಕ ಮುಖ್ಯಮಂತ್ರಿ ಅವರ ಜೊತೆ ಸಮಾಲೋಚನೆ ನಡೆಸಿ, ಅಂತಿಮ ನಿರ್ಧಾರ ತೆಗೆದುಕೊಳ್ಳುವುದಾಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಭರವಸೆ ನೀಡಿದರು.

ವಿಧಾನ ಪರಿಷತ್‌ನ ಶೂನ್ಯವೇಳೆಯಲ್ಲಿ ಎಂ.ಕೆ.ಪ್ರಾಣೇಶ್ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಮೊದಲು ನೈತಿಕ ಶಿಕ್ಷಣ ನೀಡಲಾಗುತ್ತಿತ್ತು. ಇತ್ತೀಚೆಗೆ ಅದು ಸಿಗುತ್ತಿಲ್ಲ ಎಂಬ ಆಕ್ಷೇಪಗಳು ಕೇಳಿ ಬಂದಿವೆ ಎಂದರು.

ಮಹಾಭಾರತದಲ್ಲಿ ಅರ್ಜುನನ ಮನಸ್ಸಿನಲ್ಲಿ ಗೊಂದಲವಾದಾಗ ಕೃಷ್ಣ ಬೋಧನೆ ಮಾಡಿದ್ದೇ ಭಗವದ್ಗೀತೆ. ಪ್ರಸ್ತುತ ಜಿಗುಪ್ಸೆಯ ಸನ್ನಿವೇಶಗಳಿಗೆ ಭಗವದ್ಗೀತೆ ಉತ್ತಮ ಸಂದೇಶವಾಗಬಲ್ಲದು. ಇದು ಬೋಧನೆಯಾಗಬೇಕು ಎಂಬುದು ಎಲ್ಲರ ಅಭಿಪ್ರಾಯವಾಗಿದೆ ಎಂದರು. ಸರ್ಕಾರ ಭಗವದ್ಗೀತೆಯನ್ನು ಪಠ್ಯದಲ್ಲಿ ಅಳವಡಿಸುವ ಕುರಿತು ಸಮಿತಿ ಮಾಡಲಿದೆ. ವರದಿ ಬಂದ ಬಳಿಕ ಮುಖ್ಯಮಂತ್ರಿ ಜೊತೆ ಚರ್ಚೆ ಮಾಡಿ ಹೇಗೆ ಅನುಷ್ಠಾನಕ್ಕೆ ತರಬೇಕು ಎಂಬ ನಿರ್ಧಾರ ತೆಗೆದುಕೊಳ್ಳುವುದಾಗಿ ಹೇಳಿದರು.

ಶೈಕ್ಷಣಿಕ ವರ್ಷ ಆರಂಭದ ವೇಳೆಗೆ ವಿಳಂಬವಾಗದಂತೆ ಎಲ್ಲಾ ಪಠ್ಯಪುಸ್ತಕಗಳ ಮುದ್ರಣ ಪೂರೈಸಲಾಗುವುದು ಎಂದು ಇದೇ ಸಂದರ್ಭದಲ್ಲಿ ಪ್ರಕಾಶ್ ರಾಥೋಡ್ ಅವರ ಮತ್ತೊಂದು ಪ್ರಸ್ತಾವಕ್ಕೆ ಉತ್ತರಿಸಿದರು.

# ವಿಶ್ವದಲ್ಲಿಯೇ ತಾಯಿಗೆ ವಿಶಿಷ್ಟವಾದ ಸ್ಥಾನವಿದೆ

## ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ



ಜಗಳೂರು, ಮಾ.21- ವಿಶ್ವದಲ್ಲಿಯೇ ತಾಯಿಗೆ ವಿಶಿಷ್ಟವಾದ ಸ್ಥಾನವಿದ್ದು, ವಿಶ್ವದಲ್ಲಿ ಶಾಂತಿ ನೆಲೆಸಬೇಕಾದರೆ ಮೊದಲು ಮಹಿಳಾ ವಿಮೋಚನೆಯಾಗಬೇಕು ಎಂದು ಸಿರಿಗೆರೆ ತರಳಬಾಳು ಮಠದ ಡಾ.ಶಿವಮೂರ್ತಿ ಶಿವಾಚಾರ್ಯ ಮಹಾ ಸ್ವಾಮೀಜಿ ಹೇಳಿದರು.

ಪಟ್ಟಣದ ವೀರಶೈವ ಕಲ್ಯಾಣ ಮಂಟಪದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ 'ಸ್ವರ್ಣಿಮ ಭಾರತದ ನಿರ್ಮಾಣದಲ್ಲಿ ಮಹಿಳೆಯರ ಪಾತ್ರ' ಕುರಿತಾದ ಕಾರ್ಯಕ್ರಮ ಉದ್ಘಾಟಿಸಿ ಸ್ವಾಮೀಜಿ ಮಾತನಾಡಿದರು.

ಮಾತೃ ವಾತ್ಸಲ್ಯದ ಯಶೋಧೆ ಶ್ರೀಕೃಷ್ಣನಿಗೆ ದಂಡಿಸುತ್ತಾಳೆ. ದೇವರಿಗೆ ತತ್ಸಮಾನಳು ಎಂದರೆ ಅದು ಹೆಣ್ಣು ಮಾತ್ರ. ಆದ್ದರಿಂದ ಮಹಿಳೆಯರನ್ನು ಗೌರವದಿಂದ ಕಾಣಬೇಕು, ಪ್ರೋತ್ಸಾಹ ನೀಡಬೇಕು ಎಂದರು.

ಬ್ರಹ್ಮಾಕುಮಾರಿ ಸಂಸ್ಥೆಯ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸಾಂಸಾರಿಕ ಜೀವನಕ್ಕೆ ಅಂಟಿಕೊಳ್ಳದೇ ಸಮಾಜದಲ್ಲಿ ಅಧ್ಯಾತ್ಮಿಕತೆಯ ಮೂಲಕ ಶಾಂತಿ ನೆಲೆಸುವಂತೆ ಮಾಡುತ್ತಿದ್ದಾರೆ ಎಂದು ಜಗದ್ಗುರುಗಳು ಪ್ರಶಂಸಿಸಿದರು.

ರಾಜಯೋಗಿನಿ ಬ್ರಹ್ಮಾಕುಮಾರಿ ವೀಣಾ ಮಾತನಾಡಿ, ತೊಟ್ಟಿಲ ತೂಗುವ ಕೈಗಳು ಜಗತ್ತನ್ನು ಆಳಬಲ್ಲವು. ಇದಕ್ಕೆ ಉದಾಹರಣೆಯಾಗಿ ಝಾನ್ಸಿ ರಾಣಿ ಲಕ್ಷ್ಮಿ ಭಾಯಿ, ಕಿತ್ತೂರು ರಾಣಿ ಚನ್ನಮ್ಮರಂತೆ ಸಾವಿರಾರು ಮಹಿಳೆಯರಿದ್ದಾರೆ. ಪ್ರತಿಯೊಬ್ಬ ಹೆಣ್ಣಿಗೂ ಧೈರ್ಯ ತುಂಬುವ ಕೆಲಸವಾಗಬೇಕು ಎಂದರು.

ಮಾಜಿ ಶಾಸಕ ಎಚ್.ಪಿ.ರಾಜೇಶ್ ಮಾತನಾಡಿ, ಪರಮ ಪೂಜ್ಯರ ಆಶೀರ್ವಾದದಿಂದ ಬರದನಾಡು ಭೂತಾಯಿಗೆ ತುಂಗಭದ್ರೆಯರು ಹರಿಯುತ್ತಿರುವುದು ಸಂತಸ ತಂದಿದೆ. ತುಂಗಭದ್ರೆಯರು ಹೆಣ್ಣಾಗಿ ಜಗಳೂರು ತಾಲ್ಲೂಕಿನ ಜನರ ಬವಣೆ ನೀಗಿಸಲು ಬರುತ್ತಿರುವುದು ಸಂತಸ ತಂದಿದೆ ಎಂದರು.

ಈ ಸಂದರ್ಭದಲ್ಲಿ ರಾಜಯೋಗಿನಿ ಬ್ರಹ್ಮಾಕುಮಾರಿ ಭಾರತಿ, ಶ್ರೀಮತಿ ಪುಷ್ಪ ಲಕ್ಷ್ಮಣ ಸ್ವಾಮಿ, ಫಾದರ್ ವಿಲಿಯಂ ಮಿರಾಂದ, ಶಾಹೀನಾ ಬೇಗಂ, ಸಿಪಿಐ ಮಂಜುನಾಥ್ ಪಂಡಿತ್, ಸಾಹಿತಿ ಬಿ.ಟಿ ಗೀತಾ ಮಂಜು, ಅರವಿಂದ್ ಸೇರಿದಂತೆ ಅನೇಕರು ಮಾತನಾಡಿದರು.

## ವಾಪಸಾತಿಗೆ ಸುಪ್ರೀಂ ವಿರೋಧ

(1ನೇ ಪುಟದಿಂದ) ಹಲವು ಬಾರಿ ಒತ್ತಾಯಿಸಿದ್ದರು.

ತುರ್ತು ಪತ್ರಿಕಾಗೋಷ್ಠಿಯಲ್ಲಿ ವರದಿಗಳ ವಿವರ ನೀಡಿರುವ ಘನ್ವತ್, ಕಾಯ್ದೆಗಳಿಗೆ ಹಲವು ಬದಲಾವಣೆ ತರಲು ಶಿಫಾರಸ್ಸು ಮಾಡಲಾಗಿತ್ತು. ಇದರಲ್ಲಿ ರಾಜ್ಯಗಳು ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಬದ್ಧತೆ ನೀಡುವುದೂ ಸೇರಿತ್ತು ಎಂದು ಹೇಳಿದ್ದಾರೆ.

ಈಗಿರುವ ಖರೀದಿ ನೀತಿಯನ್ನು ಬದಲಿಸಿ, ಗುತ್ತಿಗೆ ಒಪ್ಪಂದದ ಮೂಲಕ ಖರೀದಿಗೆ ಒತ್ತು ನೀಡಬೇಕು ಎಂದು ಶಿಫಾರಸ್ಸಿನಲ್ಲಿ ಹೇಳಲಾಗಿತ್ತು. ಈ ಕಾಯ್ದೆಗಳನ್ನು ವಾಪಸ್ ಪಡೆಯುವುದು ಇಲ್ಲವೇ ದೀರ್ಘ ಕಾಲ ತಡೆಯುವುದು ಅನುಚಿತ. ಇದರಿಂದ ಕೃಷಿ ಕಾಯ್ದೆಗಳ ಪರವಾಗಿರುವ ಮೌನ ಬಹುಸಂಖ್ಯಾತರಿಗೆ ಅನ್ಯಾಯ ಮಾಡಿದಂತಾಗುತ್ತದೆ ಎಂದು ಸಮಿತಿ ಹೇಳಿತ್ತು.

ಸಮಿತಿಯು ಕೃಷಿ ವಲಯಕ್ಕೆ ಸಂಬಂಧಿಸಿದವರಿಂದ ಆನ್‌ಲೈನ್ ಮೂಲಕ ವಿವರ ಪಡೆದಿತ್ತು. ಅದರ ಪ್ರಕಾರ ಶೇ.85.7ರಷ್ಟು ರೈತ ಸಂಘಟನೆಗಳು ಕೃಷಿ ಕಾಯ್ದೆಯ ಪರವಾಗಿದ್ದವು ಎಂದು ವರದಿಯಲ್ಲಿ ಹೇಳಲಾಗಿದೆ.

ವಿವಿಧ ಕೃಷಿ ಸಂಘಟನೆಗಳಿಂದ ಇ-ಮೇಲ್ ಮೂಲಕ ನಿಲುವು ಪಡೆಯಲಾಗಿತ್ತು. ಆದರೆ, ಕಾಯ್ದೆಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ಸಂಯುಕ್ತ ಕಿಸಾನ್ ಮೋರ್ಚಾ ಪದೇ ಪದೇ ಕೇಳಿದರೂ ಯಾವುದೇ ನಿಲುವು ತಿಳಿಸಿರಲಿಲ್ಲ ಎಂದು ಘನ್ವತ್ ಹೇಳಿದ್ದಾರೆ.

ಪಡಿತರ ವ್ಯವಸ್ಥೆಗಾಗಿ ಕೇಂದ್ರ ಸರ್ಕಾರ ಮಾಡುತ್ತಿರುವ ವೆಚ್ಚವನ್ನು ಲೆಕ್ಕ ಹಾಕಬೇಕು. ಈ ಹಣವನ್ನು ರೈತರಿಗೆ ನೆರವಾಗಲು ಹಾಗೂ ಬಡ ಗ್ರಾಹಕರನ್ನು ರಕ್ಷಿಸಲು ಯಾವ ರೀತಿ ಬಳಸಬೇಕು ಎಂಬ ಆಯ್ಕೆಯನ್ನು ರಾಜ್ಯಗಳಿಗೆ ಬಿಡಬೇಕು ಎಂಬುದು ಸಮಿತಿಯ ಸಲಹೆಗಳಲ್ಲಿ ಒಂದಾಗಿತ್ತು.

ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಘೋಷಿಸುವುದನ್ನು ರಾಜ್ಯಗಳಿಗೆ ಬಿಡಬೇಕು. ರಾಜ್ಯಗಳು ತಮ್ಮದೇ ವೆಚ್ಚದ ಮೂಲಕ ಬೆಂಬಲ ಬೆಲೆ ನಿಗದಿಪಡಿಸಬಹುದು ಎಂದು ಸಮಿತಿ ಶಿಫಾರಸ್ಸು ಮಾಡಿತ್ತು.

# ನಂದಿಗುಡಿ ಮಠದ ಅಭಿವೃದ್ಧಿಗೆ 2 ಕೋಟಿ ರೂ. ಅನುದಾನ ಬಿಡುಗಡೆ



### ಮಲೇಬೆನ್ನೂರು : ನಂದಿ ಸೌಹಾರ್ದ ಸಹಕಾರಿಗೆ ಭೇಟಿ ನೀಡಿದ ವೇಳೆ ಶ್ರೀಗಳ ಹೇಳಿಕೆ

ಮಲೇಬೆನ್ನೂರು, ಮಾ.21- ನಮ್ಮ ಕೋರಿಕೆ ಮೇರೆಗೆ ಮಾಜಿ ಸಿಎಂ ಯಡಿಯೂರಪ್ಪ ಅವರು ರಾಜ್ಯ ಸರ್ಕಾರದಿಂದ 2 ಕೋಟಿ ರೂ. ಅನುದಾನವನ್ನು ನಂದಿಗುಡಿ ಮಠದ ಅಭಿವೃದ್ಧಿಗೆ ಬಿಡುಗಡೆ ಮಾಡಿಸಿದ್ದಾರೆಂದು ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಅವರು ಸೋಮವಾರ ಪಟ್ಟಣದ ಪ್ರತಿಷ್ಠಿತ ಶ್ರೀ ನಂದಿ ಸೌಹಾರ್ದ ಸಹಕಾರಿಯ ಕಛೇರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿಯಿಂದ ಸ್ವಾಗತ ಸ್ವೀಕರಿಸಿ, ಮಾತನಾಡಿದರು.

ಸಮಾಜದಲ್ಲಿ ಇದುವರೆಗೂ ಸಾಕಷ್ಟು ಏರುಪೇರುಗಳು ಉಂಟಾಗಿ ಹಿನ್ನಡೆ ಆಗಿರುವುದು ನಿಜ. ಈಗ ಬಹುತೇಕ ಎಲ್ಲರೂ ಸರಿಹೋಗಿದ್ದು, ಸಮಾಜ ಸಂಘಟನೆ, ಮಠದ ಅಭಿವೃದ್ಧಿಗೆ ಗಮನ ಹರಿಸೋಣ ಎಂದರು

ಡಾ. ಸಾತೇನಹಳ್ಳಿ, ಡಾ. ಟಿ. ಬಸವರಾಜ್ ಮತ್ತಿತರರ ಶ್ರಮದಿಂದ ಪ್ರಾರಂಭವಾದ ಈ ಸಹಕಾರಿ ಸಂಸ್ಥೆ ಇವತ್ತು ಹೆಮ್ಮರವಾಗಿ ಬೆಳೆದಿದ್ದು, ಸಮಾಜದ ಆಸ್ತಿಯಾಗಿದೆ.

ಹಿರಿಯರಾದ ಡಾ. ಸಾತೇನಹಳ್ಳಿ ಮಾತನಾಡಿ, ಶ್ರೀಗಳು ಸಮಾಜದವರನ್ನು ಒಟ್ಟಾಗಿ ಕರೆದುಕೊಂಡು ಹೋಗಬೇಕು. ನಾವು ಒಗ್ಗಟ್ಟಾಗಿದ್ದರೆ ಮಾತ್ರ ಸರ್ಕಾರಗಳು ನಮ್ಮ ಕಡೆಗೆ ತಿರುಗಿ ನೋಡುತ್ತವೆ ಎಂದರು.

ಇನ್ನೋರ್ವ ಮುಖಂಡ ಡಾ. ಟಿ. ಬಸವರಾಜ್ ಮಾತನಾಡಿ, ಸಮಾಜದಲ್ಲಿ ಇದುವರೆಗೆ ಕೆಲವು ವ್ಯತ್ಯಾಸಗಳಾಗಿದ್ದವು. ಈಗ ಎಲ್ಲವೂ ಸರಿಯಾಗಿದ್ದು, ದಾವಣಗೆರೆಯಲ್ಲಿರುವ ನಂದಿಗುಡಿ ಮಠದ ಹಾಸ್ಟೆಲ್ ನಿರ್ಮಾಣ ಕೆಲಸ ಶೀಘ್ರ ಪ್ರಾರಂಭವಾಗಲಿ ಎಂದರು.

ನಂದಿ ಸೌಹಾರ್ದ ಸಹಕಾರಿ ಅಧ್ಯಕ್ಷ ಜಿಗಳಿ ಇಂದೂಧರ್ ಮಾತನಾಡಿ, ಶ್ರೀಗಳ ಹಾಗೂ ಡಾ. ಸಾತೇನಹಳ್ಳಿ, ಡಾ. ಟಿ. ಬಸವರಾಜ್ ಸೇರಿದಂತೆ ಸಮಾಜದ ಎಲ್ಲಾ ಮುಖಂಡರ ಮಾರ್ಗದರ್ಶನದಲ್ಲಿ ಈ ಸಂಸ್ಥೆ ಮತ್ತು ಮಠದ ಅಭಿವೃದ್ಧಿಗೆ ಶಕ್ತಿಮೀರಿ ಶ್ರಮಿಸುತ್ತೇನೆಂದರು.

ಈ ವೇಳೆ ಶ್ರೀಗಳು ಡಾ. ಸಾತೇನಹಳ್ಳಿ, ಡಾ. ಬಸವರಾಜ್, ಭದ್ರಾ ನಾಲಾ ನಂ. 3 ಎಇಇ ಸಂತೋಷ್, ಹಾಗೂ ಪತ್ರಕರ್ತ ಜಿಗಳಿ ಪ್ರಕಾಶ್ ಅವರನ್ನು ಸನ್ಮಾನಿಸಿದರು.

ಸಹಕಾರಿ ನಿರ್ದೇಶಕ ಹಳ್ಳಿಹಾಳ್ ಪರಮೇಶ್ವರಪ್ಪ, ಜಿ.ಬೇವಿನಹಳ್ಳಿಯ ಬಿ.ಜಿ. ಪಾಲಾಕ್ಷಪ್ಪ, ವಕೀಲ ನಂದಿತಾವರೆ ತಿಮ್ಮನಗೌಡ, ಜಿಗಳೇರ ಹಾಲೇಶಪ್ಪ, ಸಹಕಾರಿ ಸಿಇಓ ಬಸವರಾಜ್ ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.

## ನವೀನ್ ಮೃತದೇಹ ತಂದಿದ್ದು ಮೋದಿ ಅವರ ಅಂತರರಾಷ್ಟ್ರೀಯ ಮಟ್ಟದಲ್ಲಿನ ಸಾಮರ್ಥ್ಯ

ರಾಣೇಬೆನ್ನೂರು, ಮಾ.21- ಮಾರ್ಚ್ 1ರಂದು ನಿಧನರಾದ ವೈದ್ಯಕೀಯ ವಿದ್ಯಾರ್ಥಿ ನವೀನ್ ಮೃತ ದೇಹವನ್ನು ಭಾರತಕ್ಕೆ ತರಲು ಪ್ರಧಾನಿ ಮೋದಿ ಹಾಗೂ ಅವರ ಕಾರ್ಯಾಲಯದ ಜೊತೆಗೆ ವಿದೇಶಾಂಗ ಸಚಿವ ಜೈಶಂಕರ್ ಅವರು ಬಹಳಷ್ಟು ಶ್ರಮಿಸಿದರು. ಮೋದಿ ಅವರ ಅಂತರರಾಷ್ಟ್ರೀಯ ಸಾಮರ್ಥ್ಯ ಇಲ್ಲಿ ಕಾಣುತ್ತಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಚಳಗೇರಿಯಲ್ಲಿ ನವೀನ್ ಅಂತಿಮ ದರ್ಶನ ಪಡೆದು ಮಾಧ್ಯಮದ ಜೊತೆ ಮಾತನಾಡಿದರು.

ರಷ್ಯಾ ಸೇರಿದಂತೆ ಅಲ್ಲಿನ ಭಾರತದ ಎಂಬ್ಯಾಸಿ ಕಾರ್ಯಾಲಯ ಅತ್ಯಂತ ಜವಾಬ್ದಾರಿಯುತ ಕಾರ್ಯ ನಿರ್ವಹಿಸಿ, ನವೀನ್ ಮೃತದೇಹವನ್ನು ಭಾರತಕ್ಕೆ ತಂದಿದೆ. ಪ್ರಧಾನಿಗಳಿಗೆ ಹಾಗೂ ಈ ಕಾರ್ಯದಲ್ಲಿ ಭಾಗಿಯಾದ ಎಲ್ಲರಿಗೂ ಕರ್ನಾಟಕ ಸರ್ಕಾರದ ಪರವಾಗಿ ಅಭಿನಂದನೆ ತಿಳಿಸುವುದಾಗಿ ಬೊಮ್ಮಾಯಿ ಹೇಳಿದರು.

ನವೀನ್ ವೈದ್ಯನಾಗುವ ಕನಸು ಕಟ್ಟಿಕೊಂಡು ತೆರಳಿದ್ದರು, ಆದರೆ ವಿಧಿ ಅವಕಾಶ ಕೊಡಲಿಲ್ಲ, ಅವರ ಕುಟುಂಬದ ಬಗ್ಗೆ ಸರ್ಕಾರ ಹೆಚ್ಚು ಗಮನಹರಿಸಲಿದೆ.

ಇನ್ನುಳಿದ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಸರ್ಕಾರ ಹೆಚ್ಚಿಗೆ ಗಮನಕೊಡಲಿದೆ ಎಂದು ಬೊಮ್ಮಾಯಿ ಹೇಳಿದರು.

## ಹೊನ್ನಾಳಿ : ಇಂದು ಲೋಕಾಯುಕ್ತ ಪೊಲೀಸರಿಂದ ಅಹವಾಲು ಸ್ವೀಕಾರ

ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಹೊನ್ನಾಳಿ ತಾಲ್ಲೂಕಿಗೆ ಇಂದು ಭೇಟಿ ನೀಡಲಿದ್ದು, ಸಾರ್ವಜನಿಕರ ಅಹವಾಲು ಸ್ವೀಕರಿಸುವ ಕಾರ್ಯಕ್ರಮ ಹಮ್ಮಿಕೊಂಡಿರುತ್ತಾರೆ. ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎಂ.ಎಸ್. ಕೌಲಾಪೂರೆ, ಹೊನ್ನಾಳಿ ಪ್ರವಾಸಿ ಮಂದಿರದಲ್ಲಿ ಬೆಳಿಗ್ಗೆ 11 ರಿಂದ 12 ಗಂಟೆಯವರೆಗೆ ಸಾರ್ವಜನಿಕರ ಅಹವಾಲು ಸ್ವೀಕರಿಸುವರು. ಸರ್ಕಾರಿ ಕಚೇರಿಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರು ಅಹವಾಲು ಸಲ್ಲಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಜಿಲ್ಲೆಯ ಕಾಂಗ್ರೆಸ್ ಸದಸ್ಯತ್ವ ಅಭಿಯಾನದಲ್ಲಿ ಹೊನ್ನಾಳಿ ಪ್ರಥಮ



### ಮಾಜಿ ಶಾಸಕ ಡಿ.ಜಿ. ಶಾಂತನಗೌಡ

ಹೊನ್ನಾಳಿ, ಮಾ. 21- ಕಾಂಗ್ರೆಸ್ ಪಕ್ಷದ ಕೆಲಸವನ್ನು ನಿಮ್ಮ ಮನೆಯ ಕೆಲಸವೆಂದು ತಿಳಿದು, 224 ಬೂತ್‌ಗಳಲ್ಲಿ 50 ಸಾವಿರಕ್ಕೂ ಹೆಚ್ಚು ಸದಸ್ಯತ್ವದ ಗುರಿ ದಾಟಬೇಕು ಎಂದು ಕಾಂಗ್ರೆಸ್ ಕಾರ್ಯಕರ್ತರಿಗೆ ಮಾಜಿ ಶಾಸಕ ಡಿ.ಜಿ. ಶಾಂತನಗೌಡ ಕರೆ ನೀಡಿದರು.

ಪಟ್ಟಣದ ಖಾಸಗಿ ಸಭಾಂಗಣದಲ್ಲಿ ಕಾಂಗ್ರೆಸ್ ಸದಸ್ಯತ್ವ ನೋಂದಣಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಪಕ್ಷದ ರಾಜ್ಯಾಧ್ಯಕ್ಷ ಡಿ.ಕೆ.ಶಿವಕುಮಾರ್ ಸದಸ್ಯತ್ವ ಅಭಿಯಾನವನ್ನು ಗಂಭೀರವಾಗಿ ಪರಿಗಣಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಪಕ್ಷದ ಕಾರ್ಯಕರ್ತರು, ಮುಖಂಡರು ಸದಸ್ಯತ್ವ ಅಭಿಯಾನವನ್ನು ತಮ್ಮ ಸ್ವಂತ ಕೆಲಸವೆಂದು ಪರಿಗಣಿಸಿ, ತಮ್ಮ ತಮ್ಮ ಬೂತ್‌ಗಳಲ್ಲಿ ಕನಿಷ್ಠ 250 ಸದಸ್ಯರನ್ನು ನೋಂದಣಿ ಮಾಡಿಸುವಂತೆ ಮನವಿ ಮಾಡಿದರು.

ಪಕ್ಷ ನಿಷ್ಠೆ ಅತ್ಯಂತ ಮಹತ್ವದ್ದು. ಪಕ್ಷವಿದ್ದರೆ ನಾವೆಲ್ಲರೂ ಅಧಿಕಾರ ಅನುಭವಿಸುತ್ತೇವೆ. ತಾಲ್ಲೂಕಿನಲ್ಲಿ ರಾಜಕಾರಣ ಮಾಡಲು ಸಾಧ್ಯವಾಗುತ್ತದೆ. ಅದನ್ನು ನಮ್ಮ ಕಾರ್ಯಕರ್ತರು ಮರೆಯಬಾರದು. ಸದಸ್ಯತ್ವ ಅಭಿಯಾನ ಜಿಲ್ಲೆಗೆ ಮಾದರಿಯಾಗಬೇಕು ಎಂದರು.

ಮುಖಂಡ ಎಂ.ಸಿದ್ದಪ್ಪ ಮಾತನಾಡಿ, ಪಕ್ಷದ ಮುಖಂಡರಲ್ಲಿ ಮತ್ತು ಕಾರ್ಯಕರ್ತರ ನಡುವೆ ಅಂತರ ಕಡಿಮೆಯಾಗುತ್ತಿರು ವುದರಿಂದ ಪಕ್ಷದ ವತಿ ಯಿಂದ ಸದಸ್ಯತ್ವ ಅಭಿ ಯಾನ ಆರಂಭವಾಗಿದೆ. ಈ ಮೂಲಕ ಪಕ್ಷದ ಕಾರ್ಯಕರ್ತರ ಕುಂದುಕೊರತೆ ಆಲಿಸುವ ಮೂಲಕ ಅವರ ಕಷ್ಟಗಳನ್ನು ಬಗೆಹರಿಸಿಕೊಳ್ಳಬಹುದಾಗಿದೆ ಎಂದರು.

ಮುಖಂಡ ಡಾ. ಈಶ್ವರನಾಯ್ಕ್ ಮಾತನಾಡಿದರು. ಸಭೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಣ್ಣಕ್ಕಿ ಬಸವನಗೌಡ, ಜಿ.ಪಂ. ಮಾಜಿ ಸದಸ್ಯ ಡಿ.ಜಿ. ವಿಶ್ವ ನಾಥ್, ಡಾ.ಈಶ್ವರ ನಾಯ್ಕ್, ಆರ್. ನಾಗಪ್ಪ, ಜಿಲ್ಲಾ ಯುವ ಕಾಂಗ್ರೆಸ್ ಉಪಾಧ್ಯಕ್ಷ ರಂಜಿತ್, ದಿಡಗೂರು ಪ್ರಕಾಶ್, ಎಂ.ರಮೇಶ್, ಚೀಲೂರು ವಾಜೀದ್, ನುಚ್ಚಿನ ವಾಗೀಶ್, ಪ್ರದೀಪ್‌ಗೌಡ ಹಾಗು ಇತರರು ಇದ್ದರು.

## ನಗರದಲ್ಲಿ ಇಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

ತರಳಬಾಳು ಬಡಾವಣೆ 2ನೇ ಮುಖ್ಯರಸ್ತೆ ಮತ್ತು 1, 4, 5, 6 ಮತ್ತು 7ನೇ ಅಡ್ಡರಸ್ತೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

## ಅರ್ಧ ಭೂಮಿ ಸುತ್ತಿ ಬಂದ ಮೃತದೇಹ

(1ನೇ ಪುಟದಿಂದ) ಮೃತದೇಹವನ್ನು ರಕ್ಷಿಸಿದ್ದರು ಎಂಬಾಮಿಂಗ್ ಮಾಡಿಸಿದರು ಎಂದು ಬೊಮ್ಮಾಯಿ ಹೇಳಿದರು. ಅಷ್ಟರಲ್ಲೇ ಎಂಬಾಮಿಂಗ್ ಮಾಡಿದ ಜಾಗದ ಮೇಲೆ ದಾಳಿ ಆರಂಭವಾಯಿತು. ಅಲ್ಲಿಂದ ಮೃತದೇಹವನ್ನು ಇನ್ನೊಂದು ಶವಾಗಾರಕ್ಕೆ ರವಾನಿಸಲಾಯಿತು. ಅಲ್ಲಿಯೂ ಬಾಂಬ್ ದಾಳಿ ಆರಂಭವಾಯಿತು. ಶೆಲ್ ದಾಳಿ ಕಡಿಮೆ ಆದ ನಂತರ ಮೃತದೇಹವನ್ನು ಪೋಲ್ಯಾಂಡ್‌ನ ವಾರ್ಸೋವಾಗೆ ತರಲಾಯಿತು. ಅಲ್ಲಿಂದ ಮೃತದೇಹವನ್ನು ರಕ್ಷಿಸಿ, ದುಬೈಗೆ ತರಲಾಯಿತು. ಆ ಮೂಲಕ ಮೃತದೇಹ ಬೆಂಗಳೂರಿಗೆ ಬಂದಿದೆ. ಹರಿಹರದಲ್ಲಿ ಎಂಬಾಮಿಂಗ್ ತೆಗೆಸಿ ಶೀತಲೀಕರಣಗೊಳಿಸಲಾದ ಶವಪೆಟ್ಟಿಗೆಯಲ್ಲಿರಿಸಿ ಅಂತಿಮ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿದೆ ಎಂದು ಮುಖ್ಯಮಂತ್ರಿ ವಿವರಿಸಿದರು.

ಕೊನೆಯ ಬಾರಿ ನವೀನ್ ನೋಡಲು ಕುಟುಂಬದವರು ಕಳೆದ ಮೂರು ವಾರಗಳಿಂದ ಪರಿತಪಿಸುತ್ತಿದ್ದರು. ಕೊನೆಗೂ ನವೀನ್ ಪಾರ್ಥಿವ ಶರೀರ ಅರ್ಧ ಭೂ ಭಾಗ ಸುತ್ತಿ ತವರಿಗೆ ಮರಳಿದ್ದು, ಕುಟುಂಬದವರಿಗೆ ನೋವಿನ ನಡುವೆಯೂ ಸ್ವಲ್ಪ ಸಮಾಧಾನ ತರಿಸಿದೆ.

## ನಗರದಲ್ಲಿ ಇಂದು ಉದ್ಯೋಗ ಮೇಳ

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಜಿಲ್ಲಾ ಕೌಶಲ್ಯ ಮಿಷನ್ ಇವರ ವತಿಯಿಂದ ಯು.ಬಿ.ಡಿ.ಟಿ ಕಾಲೇಜಿನಲ್ಲಿ ಇಂದು ಉದ್ಯೋಗ ಮೇಳ ನಡೆಯಲಿದೆ.

ಜಿಲ್ಲೆಯ ಯುವಕ-ಯುವತಿಯರು ಭಾಗವಹಿಸಲು ಗೂಗಲ್ ಫೋರಂ ಲಿಂಕ್ https://tinyurl.com/bdafha6m ನಲ್ಲಿ ಮಾಹಿತಿಯನ್ನು ಭರ್ತಿಗೊಳಿಸಿ ನೋಂದಣಿ ಮಾಡಿಕೊಳ್ಳಬಹುದಾಗಿದೆ.

ವಿವರಕ್ಕೆ 8971749636 ಹಾಗೂ ಇಮೇಲ್ ವಿಳಾಸ dsmodvg@gmail.com ಅಥವಾ ಜಿಲ್ಲಾಡಳಿತ ಭವನ, 1ನೇ ಮಹಡಿ, ಕೊಠಡಿ ಸಂಖ್ಯೆ 24, ಬಿ ಬ್ಲಾಕ್, ದಾವಣಗೆರೆ ಇಲ್ಲಿ ಸಂಪರ್ಕಿಸಿ.

# ಮೋದಿ ಸರ್ಕಾರದಿಂದ 93 ಲಕ್ಷ ಕೋಟಿ ಸಾಲದ ಹೊರೆ



ದಾವಣಗೆರೆ, ಮಾ.21- ದೇಶದಲ್ಲಿ ಆಡಳಿತ ನಡೆಸಿದ ಕಾಂಗ್ರೆಸ್ 60 ವರ್ಷಗಳಲ್ಲಿ 53 ಲಕ್ಷ ಕೋಟಿ ಸಾಲ ಮಾಡಿತ್ತು. ಆದರೆ, ಕೇವಲ 7 ವರ್ಷ ಆಡಳಿತ ನಡೆಸಿದ ಮೋದಿ ಸರ್ಕಾರ 93 ಲಕ್ಷ ಕೋಟಿ ಸಾಲ ಮಾಡಿದೆ ಎಂದು ಕೆಪಿಸಿಸಿ ಸದಸ್ಯ ಹೆಚ್. ದುಗ್ಗಪ್ಪ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸ್ವಾತಂತ್ರ್ಯಾ ನಂತರ ಕಾಂಗ್ರೆಸ್ ಪಕ್ಷದಿಂದ ಪ್ರಧಾನಮಂತ್ರಿಯಾಗಿ ಜವಾಹಾರ್ ಲಾಲ್ ನೆಹರು ಅವರು ಅಧಿಕಾರ ವಹಿಸಿಕೊಂಡಾಗ ದೇಶದ ಕೋಟ್ಯಂತರ ಜನರ ಹಸಿವು, ಕುಡಿಯುವ ನೀರು, ವಿದ್ಯುತ್ ಉತ್ಪಾದನೆ, ಕೈಗಾರಿಕೆಗಳ ಸ್ಥಾಪನೆ, ಆರ್ಥಿಕ ಸ್ಥಿತಿಯ ಚೇತರಿಕೆ, ದೇಶದ ಗಡಿ ಭದ್ರತೆ ವಿಚಾರ, ಹೀಗೆ ಸಾಕಷ್ಟು ಸವಾಲುಗಳು ಅವರಿಗೆ ಎದುರಾಗಿದ್ದವು. ಅವೆಲ್ಲವನ್ನೂ ಅವರು ಸಮರ್ಥವಾಗಿ ನಿರ್ವಹಿಸಿ, ದೇಶವನ್ನು ಕಟ್ಟಿದರು ಎಂದು ಸ್ಮರಿಸಿದರು.

ನೆಹರು ಅವರು ಕೋಟ್ಯಾಂತರ ಜನರ ಹಸಿವು ನೀಗಿಸಲು ಹಸಿರು ಕ್ರಾಂತಿ ಆರಂಭಿಸಿ, ದೇಶದಲ್ಲೆಡೆ ರೈತರಿಗೆ ಪ್ರೋತ್ಸಾಹ ನೀಡಿ ಬೀಜ, ಗೊಬ್ಬರ ನೀಡಿದರು. ನೀರಾವರಿಗೆ ಒತ್ತು ನೀಡಿ, ದೇಶದೆಲ್ಲೆಡೆ ಅಣೆಕಟ್ಟುಗಳು, ಚಾನಲ್‌ಗಳು, ಕೆರೆಗಳನ್ನು ಕಟ್ಟಿಸುವ ಮೂಲಕ ರೈತರ ಬೆಳೆಗಳಿಗೆ ನೀರು ಒದಗಿಸಿದರು. ಜನತೆಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿದರು. ದೇಶದಲ್ಲಿರುವ ಕತ್ತಲೆ ಓಡಿಸಲು ಕೈಗಾರಿಕೆಗಳಿಗೆ ಬೇಕಾಗುವ ವಿದ್ಯುತ್ ಪಡೆಯಲು ದೇಶದುದ್ದಕ್ಕೂ ಅನೇಕ ನದಿ, ಜಲಪಾತಗಳು ಇರುವ ಕಡೆ ದೊಡ್ಡ ದೊಡ್ಡ ಜಲವಿದ್ಯುತ್ ಘಟಕಗಳನ್ನು ಸ್ಥಾಪಿಸಿ, ಜನತೆಗೆ ಬೆಳಕಿನ ಕೊರತೆಯಾಗದಂತೆ ನೋಡಿಕೊಂಡರು ಎಂದು ಶ್ಲಾಘಿಸಿದ್ದಾರೆ.

ಎಲ್ಲಾ ಕ್ಷೇತ್ರಗಳು ಸರ್ಕಾರದ ಸ್ವಾಮ್ಯಕ್ಕೆ ಸೇರಿರುವುದರಿಂದ ಅಲ್ಲಿ ಜನತೆಗೆ ಹೆಚ್ಚು ಹೆಚ್ಚು ಉದ್ಯೋಗ ಸಿಕ್ಕಿತು. ಹೀಗೆ ದೇಶದ ಆಡಳಿತವನ್ನು ಸುಭಿಕ್ಷವಾಗಿ ನಡೆಸಿದರು. ಈ ಯೋಜನೆಗಳಿಗಾಗಿ 60 ವರ್ಷಗಳ ಆಡಳಿತದಲ್ಲಿ ಕೇವಲ 53 ಲಕ್ಷ ಕೋಟಿ ಹಣ ಸಾಲ ಮಾಡಿದ್ದರು. ಆದರೆ, ಮೋದಿ ಸರ್ಕಾರ ಈಗ 7 ವರ್ಷಗಳ ಆಡಳಿತದಲ್ಲಿ 93 ಲಕ್ಷ ಕೋಟಿ ಸಾಲ ಮಾಡಿದೆ ಎಂದು ಕಿಡಿಕಾರಿದ್ದಾರೆ.

ರೈತರಿಗೆ ನೀಡುವ ಬೀಜ, ರಸಗೊಬ್ಬರ ಒಳಗೊಂಡು, ಬಿಎಸ್‌ಎನ್‌ಎಲ್, ವಿದ್ಯುತ್ ಘಟಕ, ಬ್ಯಾಂಕುಗಳು, ಎಲ್‌ಐಸಿ, ವಿಮಾನ ಸಂಚಾರ, ಕಲ್ಲಿದ್ದಲು ಘಟಕ ಸೇರಿದಂತೆ ಅನೇಕ ಕ್ಷೇತ್ರಗಳನ್ನು ಖಾಸಗೀಕರಣ ಮಾಡಿ, ರಿಲಾಯನ್ಸ್, ಟಾಟಾ, ಬಿರ್ಲಾದಂತಹ ಶ್ರೀಮಂತರಿಗೆ ಮಾರಿ, ಸರ್ಕಾರಕ್ಕೆ ಆ ಕ್ಷೇತ್ರಗಳಿಂದ ಬರುತ್ತಿದ್ದ ಆದಾಯವನ್ನು ಕುಂಠಿತಗೊಳಿಸಿಕೊಂಡು ಅವರು ಕಟ್ಟುವ ಟ್ಯಾಕ್ಸ್‌ಗಾಗಿ ಕಾಯುತ್ತಾ ಕುಳಿತಿದೆ ಎಂದು ಅಸಹನೆ ವ್ಯಕ್ತಪಡಿಸಿದ್ದಾರೆ.

ಅನೇಕ ಸರ್ಕಾರಿ ನೌಕರರು ಕೆಲಸ ಕಳೆದುಕೊಂಡು ಆತ್ಮಹತ್ಯೆ ಮಾಡಿಕೊಂಡರು. ಕೆಲವರು ಬೀದಿ ಪಾಲಾದರು. ಇದಕ್ಕೆಲ್ಲಾ ಕಾರಣ ಯಾರು?, ನೋಟ್ ಬ್ಯಾನ್ ಮಾಡಿದ ಮೋದಿ ಸರ್ಕಾರ 200 ಲಕ್ಷ ಕೋಟಿ ನಷ್ಟ ಅನುಭವಿಸಿತು, ಹಣದ ಅಭಾವ ಉಂಟಾಯಿತು. ಈ ನಷ್ಟ ಸರಿದೂಗಿಸಲು 93 ಲಕ್ಷ ಕೋಟಿ ಸಾಲ ಮಾಡಿದ್ದಾರೆ ಎಂದು ಆಪಾದಿಸಿದ್ದಾರೆ.


## ಸವಿನೆನಪು



### ಶ್ರೀಮತಿ ಶಕುಂತಲ ಬಿ.ಜೆ.

ಜನನ : 10.09.1958 ನಿಧನ : 22.03.2012

ನೀವು ನಮ್ಮನ್ನಗಲಿ ಇಂದಿಗೆ ಹನ್ನೊಂದು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಎನ್. ಅಜ್ಜಪ್ಪ ಮತ್ತು ಮಕ್ಕಳು ಹಾಗೂ ಮೊಮ್ಮಕ್ಕಳು, ಮಠದ ಸಿರಿಗೆರೆ.

ಶ್ರೀ ವಿಘ್ನೇಶ್ ಆಟೋ ಡಯಾಗ್ನೋಸಿಸ್
ಶ್ರೀ ವಿಘ್ನೇಶ್ ಆಟೋ ಏಜೆನ್ಸೀಸ್, ಪಿ.ಬಿ. ರಸ್ತೆ, ದಾವಣಗೆರೆ.
ಶ್ರೀ ವಿಘ್ನೇಶ್ ಆಟೋ ಏಜೆನ್ಸೀಸ್, ಚಿತ್ರದುರ್ಗ.
V 3 ಏಜೆನ್ಸೀಸ್, ದಾವಣಗೆರೆ.



## ಆರನೇ ವರ್ಷದ ಪುಣ್ಯಸ್ಮರಣೆ



### ದಿ|| ಸೌಮ್ಯ ಕೆ.ಎನ್

ಸ್ಟಾಫ್ ನರ್ಸ್,
ಎಸ್.ಎಸ್. ಹೈಟೆಕ್ ಆಸ್ಪತ್ರೆ.

ನೀವು ನಮ್ಮನ್ನಗಲಿ ಇಂದಿಗೆ ಆರು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,

ದಿ|| ಸೌಮ್ಯ ಕೆ.ಎನ್

✦ ಪತಿ : ಗಿರಿಧರ ಎನ್.ಆರ್. ✦ ಮಗಳು : ಮೊನಾಲಿ ಎನ್.ಜಿ.,
✦ ಶ್ರೀಮತಿ ತುಳಸಿ ✦ ಎನ್.ಆರ್. ಊರ್ಮಿಳಾ,
✦ ಶ್ರೀಮತಿ ಭಾನು ಶ್ರೀ ರವೀಂದ್ರ ✦ ಶೀಥಲ್ ಎನ್.ಆರ್.
ಮತ್ತು ಬಂಧು-ಮಿತ್ರರು.



**ಓದುಗರ ಗಮನಕ್ಕೆ** ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು


### ಮಡಿವಾಳ ಆರ್. ಜಗದೀಶ್ ನಿಧನ



ದಾವಣಗೆರೆ ಬಸವೇಶ್ವರ ಬಡಾವಣೆ ಮಡಿವಾಳರ ಆರ್.ಜಗದೀಶ್ (49) ಇವರು ದಿನಾಂಕ : 21.3.2022 ರ ಸೋಮವಾರ ಸಂಜೆ 6:30 ಕ್ಕೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯ ಕ್ರಿಯೆಯು ದಿನಾಂಕ: 22.3.2022 ರ ಮಂಗಳವಾರ ಮಧ್ಯಾಹ್ನ 2 ಗಂಟೆಗೆ ಗಾಂಧಿನಗರದ ವೀರಶೈವ ರುಧ್ರಭೂಮಿಯಲ್ಲಿ ನೆರವೇರಲಿದೆ.

### ಶ್ರೀಮತಿ ನಾಗರತ್ನಮ್ಮ ನಿಧನ



ದಾವಣಗೆರೆ ಇ.ಡಬ್ಲ್ಯೂ.ಎಸ್ ಕ್ವಾಟ್ರಸ್ ಜಾಲಿನಗರ ಪಾರ್ಕ್ ಹತ್ತಿರದ ವಾಸಿ ದಿ. ಎನ್. ಕೊಟ್ರಪ್ಪನವರ ಧರ್ಮಪತ್ನಿ ಶ್ರೀಮತಿ ನಾಗರತ್ನಮ್ಮ (82) ಇವರು ದಿನಾಂಕ 21.03.2022ರ ಸೋಮವಾರ ಮಧ್ಯಾಹ್ನ 3.30ಕ್ಕೆ ನಿಧನರಾದರು. ಓರ್ವ ಪುತ್ರ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 22.03.2022ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಗಾಂಧಿನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

## ಜಿಎಸ್‌ಟಿ ಕುರಿತು ನಗರದಲ್ಲಿ ಇಂದು ಕಾರ್ಯಾಗಾರ

ಜಿಎಸ್‌ಟಿ ಕುರಿತು ಜಾಗೃತಿ ಮತ್ತು ಬದಲಾವಣೆ ಕಾರ್ಯಾಗಾರವು ಇಂದು ಮಧ್ಯಾಹ್ನ 3 ಕ್ಕೆ ಬಾಪೂಜಿ ಆಡಿಟೋರಿಯಂನಲ್ಲಿ ನಡೆಯಲಿದೆ.

ಕಾರ್ಯಾಗಾರದಲ್ಲಿ ಎನ್.ಜಿ. ಕುಮಾರೇಶ್, ಪ್ರದೀಪ್‌ಕುಮಾರ್ ಸುಮನ್, ಮಾಜಿ ಶಾಸಕ, ಛೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಮೋತಿ ವೀರಣ್ಣ, ಸಿ.ಎ. ಅಸೋಸಿಯೇಷನ್ ಅಧ್ಯಕ್ಷ ಅಥಣಿ ವೀರಣ್ಣ, ಶಂಭುಲಿಂಗಪ್ಪ, ಕಿರಣ್ ಪಾಟೀಲ್, ಬಿ.ಜೆ. ಬಸವರಾಜಪ್ಪ, ಜೆಂಬಗಿ ರಾಧೇಶ್, ಹೆಚ್.ಟಿ. ಸುಧೀಂದ್ರರಾವ್ ಇವರು ಪಾಲ್ಗೊಳ್ಳಲಿದ್ದಾರೆ ಎಂದು ಸ್ಟಡಿ ಕಮಿಟಿ ಛೇರ್‌ಮನ್ ಹೆಚ್.ಟಿ. ಸುಧೀಂದ್ರರಾವ್ ತಿಳಿಸಿದ್ದಾರೆ.

# ಹರಿಹರದಲ್ಲಿ ಇಂದಿನಿಂದ ಊರಮ್ಮನ ಜಾತ್ರೆ

ಹರಿಹರದ ಗ್ರಾಮದೇವತೆ ಊರಮ್ಮ ದೇವಿಯ ಜಾತ್ರಾ ಮಹೋತ್ಸವ ಇಂದಿನಿಂದ 26ರ ಶನಿವಾರದವರೆಗೆ ನಡೆಯಲಿದ್ದು, ಎಲ್ಲಾ ಸಿದ್ಧತೆಗಳೂ ಪೂರ್ಣಗೊಂಡಿದ್ದು, ನಗರ ನವ ವಧುವಿನಂತೆ ಸಿಂಗಾರಗೊಂಡಿದೆ. ನಗರದ ದೇವಸ್ಥಾನ ರಸ್ತೆಯಲ್ಲಿ ನಿರ್ಮಿಸಿದ ಭವ್ಯ ಮಂಟಪ ಆಕರ್ಷಣೀಯವಾಗಿದೆ.



ಆಕರ್ಷಿಸುತ್ತಿರುವ ಭವ್ಯ ಮಂಟಪ

ಅರವತ್ತಾರು ಹಳ್ಳಿಯ ಒಡತಿಯಾದ ಶ್ರೀ ಗ್ರಾಮದೇವತೆ ಊರಮ್ಮ ದೇವಿಯ ಜಾತ್ರೆ, ಸುತ್ತಮುತ್ತಲಿನ ನಗರದ ಜಾತ್ರೆಗಿಂತ ಬಹುದೊಡ್ಡ ಜಾತ್ರೆಯಾಗಿದೆ.

ಇಲ್ಲಿನ ಹಬ್ಬದ ಸಂಭ್ರಮ ಕಸಬಾ ಮತ್ತು ಮಾಜೇನಹಳ್ಳಿ ಗ್ರಾಮದ ಹೆಸರಿನಲ್ಲಿ ನಡೆಯುತ್ತದೆ. ಗ್ರಾಮದೇವತೆ ಒಂದೇ ಆದರೂ ಎರಡು ಕಡೆಗಳಲ್ಲಿ ಚರಗ ಹಾಕುವ ಸಂಪ್ರದಾಯ, ಹರಿಹರ ನಗರದಲ್ಲಿ ಪೂರ್ವಜರ ಕಾಲದಿಂದಲೂ ರೂಢಿಯಲ್ಲಿದೆ. ಹಾಗಾಗಿ ರಾಜ್ಯದಲ್ಲೇ ಒಂದು ವಿಶಿಷ್ಟ ಹಾಗೂ ವೈಭವ ಪೂರಿತ ಹಬ್ಬವಾಗಿದೆ.

ಇದರಿಂದಾಗಿ ನಾಡಿನಾದ್ಯಂತ ಬಹುದೊಡ್ಡ ಪ್ರಮಾಣದಲ್ಲಿ ಸಾರ್ವಜನಿಕರು ಆಗಮಿಸಿ, ದೇವಿಯ ದರ್ಶನ ಮಾಡಿಕೊಂಡು ಆಶೀರ್ವಾದ ಪಡೆಯುತ್ತಾರೆ ಮತ್ತು ದೇವಿಗೆ ವಿಶೇಷ ಪೂಜೆ ಸಲ್ಲಿಸುತ್ತಾರೆ.

ಗ್ರಾಮದೇವತೆ ಊರಮ್ಮ ದೇವಿಯ ಜಾತ್ರೆಗೆ ತನ್ನದೇ ಆದ ವೈಶಿಷ್ಟ್ಯತೆಯಿದೆ ಮತ್ತು ಬಹಳ ಶಕ್ತಿದೇವತೆ ಎಂದು ಪ್ರಸಿದ್ಧಿ ಪಡೆದಿರುವುದರಿಂದ ಭಕ್ತರು ಆದಾಯ, ಹಣ ಖರ್ಚು- ವೆಚ್ಚದ ವ್ಯತ್ಯಾಸದ ಬಗ್ಗೆ ಗಮನವನ್ನು ಕೊಡುವುದಿಲ್ಲ. ರಾಜ್ಯದಾದ್ಯಂತ ವಿವಿಧ ಜಿಲ್ಲೆಯ ಮತ್ತು ತಾಲ್ಲೂಕಿನ ಭಕ್ತರ ದಂಡೇ ಹರಿದು ಬಂದು, ದೇವಿಯ ದರ್ಶನ ಪಡೆದು ಹರಕೆಯನ್ನು ಪೂರೈಸುತ್ತಾರೆ.

ಮಾಜೇನಹಳ್ಳಿ ಗ್ರಾಮದವರು ಹಾಗೂ ಕಸಬಾ ಗ್ರಾಮದವರು ಮಂಗಳವಾರ ಬೆಳಗ್ಗೆ ಬೆಲ್ಲದ ಬಂಡಿಯಲ್ಲಿ ಚರಗಕ್ಕೆ ಬೇಕಾಗುವ ಜೋಳವನ್ನು ಮೆರವಣಿಗೆ ಮೂಲಕ ಚೌಕಿ ಮನೆಯ ಆವರಣಕ್ಕೆ ತಂದು, ಸಂಜೆ ಕೊಪ್ಪರಿಗೆಯಲ್ಲಿ ಹಾಕಿ ಬೇಯಿಸಿ, ನಂತರದಲ್ಲಿ ಪ್ರತ್ಯೇಕವಾಗಿ ಎರಡು ರಾಶಿಯನ್ನು ಮಾಡಿ ಕಾಯುತ್ತಾರೆ. ರಾತ್ರಿ ವೃಶ್ಚಿಕ ಲಗ್ನದ ಶುಭಾಂಶದಲ್ಲಿ ಶ್ರೀ ಅಮ್ಮನವರಿಗೆ ಮಾಂಗಲ್ಯ ಧಾರಣೆ, ಚರಗ ಇಳಿಸಿ ರಾಶಿ ಮಾಡುತ್ತಾರೆ.

ನಗರದ ಶಿವಮೊಗ್ಗ ರಸ್ತೆಯ ಮಾಜೇನಹಳ್ಳಿ ಗ್ರಾಮದೇವತೆ ದೇವಸ್ಥಾನದಲ್ಲಿ ಗ್ರಾಮದೇವತೆ ಊರಮ್ಮ ದೇವಿಗೆ ಮಂಗಳವಾರ ಬೆಳಗ್ಗೆ ಪಂಚಾಮೃತ ಅಭಿಷೇಕ, ಕುಂಕುಮಾರ್ಚನೆ, ಹಣ್ಣು, ಕಾಯಿ ಫಲ ಸಮರ್ಪಣೆ ಹಾಗೂ ಹರಕೆ ಒಪ್ಪಿಸುವುದು, ವಿಶೇಷ ಪೂಜೆ, ಅಲಂಕಾರ, ಮಹಾಮಂಗಳಾರತಿ ಮಾಡಿ ಸಂಜೆ ದೇವಿಯನ್ನು ಮೆರವಣಿಗೆ ಮೂಲಕ ಘಟ್ಟಿ ಗಡಿಗೆಯೊಂದಿಗೆ ದೇವಸ್ಥಾನ ರಸ್ತೆಯ ಚೌಕಿ ಮನೆಗೆ ತಂದು ಪ್ರತಿಷ್ಠಾಪನೆ ಮಾಡಲಾಗುತ್ತದೆ. ನಂತರದಲ್ಲಿ ಜೋಯಿಸರು ಸೇರಿದಂತೆ ಗೌಡ್ರು, ಶಾನಭೋಗರು, ಬಣಕಾರರು, ಬಾಬು ದಾರರು, ನಗರದ ಸಾರ್ವಜನಿಕರೊಂದಿಗೆ ಚೌಕಿ ಮನೆಯಲ್ಲಿ ದೇವಿಗೆ ವಿಶೇಷ ಪೂಜಾ ಕಾರ್ಯಗಳನ್ನು ನಡೆಸಲಾಗುತ್ತದೆ. ಬೇಯಿಸಿದ ಜೋಳದ ರಾಶಿ ಮುಂದೆ ಎರಡು ಗ್ರಾಮದ ಯುವಕರ ತಂಡವು ಹುಲಿಗ್ಯೋ ಹುಲಿಗ್ಯೋ ಹಾಗೂ ಉಧೋ, ಉಧೋ ಎಂಬ ಉದ್ಘೋಷವನ್ನು ಮಾಡುತ್ತಾರೆ.

ಬೆಳಗಿನ ಜಾವದಲ್ಲಿ ಹಿಟ್ಟಿನ ಕೋಣದ ವಧೆಯನ್ನು ಮಾಡಲಾಗುತ್ತದೆ. ಆ ನಂತರದಲ್ಲಿ ಕೋಣದ ರಕ್ತವನ್ನು ಸಿರಿಂಜ್ ಮೂಲಕ ತೆಗೆದು ಚರಗಕ್ಕೆ ಹಾಕಿ ದೇವಿಗೆ ವಿಶೇಷ ಮಹಾಮಂಗಳಾರತಿ ಮಾಡಿ, ಚರಗ ಚೆಲ್ಲಲಾಗುತ್ತದೆ. ಊರಿಗೆ ಚರಗ ಬಿದ್ದ ನಂತರ ಭಕ್ತರು ದೇವಿಗೆ ಹರಕೆ ತೀರಿಸಿ, ದರ್ಶನ ಪಡೆಯುತ್ತಾರೆ.

ಉತ್ಸವದ ಅಂಗವಾಗಿ ದಿ. 19 ಶನಿವಾರ 20 ಭಾನುವಾರ ಭಾರೀ ಟಗರಿನ ಕಾಳಗ, ದಿ 24ರ ಗುರುವಾರ ಕಸಬಾ ಮತ್ತು ಮಾಜೇನಹಳ್ಳಿ ಗ್ರಾಮದವರಿಂದ ಬೆಳಗ್ಗೆ 12-30 ಕ್ಕೆ ಬೆಲ್ಲದ ಬಂಡಿ ಮೆರವಣಿಗೆ, ದಿ. 25 ಶುಕ್ರವಾರ ದಿಂದ 27 ರ ಭಾನುವಾರ ದವರೆಗೆ 3 ದಿನ ಡಿ.ಆರ್.ಎಂ. ಮೈದಾನದಲ್ಲಿ ಬಯಲು ಜಂಗೀ ಕುಸ್ತಿ ಆಯೋಜಿಸಲಾಗಿದೆ. ಪರಸ್ಥಳದಿಂದ ಬರುವ ಕುಸ್ತಿ ಪಟುಗಳಿಗೆ ಊಟ, ವಸತಿ ಸೌಕರ್ಯ ಮಾಡಲಾಗಿದೆ. ದಿ.25 ಶುಕ್ರವಾರದಿಂದ ದಿ.27 ರ ಭಾನುವಾರದವರೆಗೆ ಗಾಂಧಿ ಮೈದಾನದ ಭವ್ಯ ರಂಗಮಂದಿರದಲ್ಲಿ ಮನೋರಂಜನೆ ಕಾರ್ಯಕ್ರಮಗಳು ನಡೆಯಲಿವೆ.

ನಗರದಲ್ಲಿ ಗ್ರಾಮದೇವತೆ ಊರಮ್ಮ ದೇವಿಯ ಹಬ್ಬದ ದಿನಾಂಕ ಘೋಷಣೆ ಆದಾಗಿನಿಂದ ಮಾಜೇನಹಳ್ಳಿ ಗ್ರಾಮದ ಅಧ್ಯಕ್ಷ ಗೌಡ್ರು ಚೆನ್ನಬಸಪ್ಪ, ಕಸಬಾ ಗೌಡ್ರು ಲಿಂಗರಾಜ್ ಪಾಟೀಲ್, ಉತ್ಸವ ಸಮಿತಿಯ ಗೌರವ ಅಧ್ಯಕ್ಷ ಎಸ್. ರಾಮಪ್ಪ, ಅಧ್ಯಕ್ಷ ಕೆ.ಅಣ್ಣಪ್ಪ, ಪ್ರಧಾನ ಕಾರ್ಯದರ್ಶಿ ಬೆಣ್ಣೆ ರೇವಣಸಿದ್ದಪ್ಪ, ಖಜಾಂಚಿ ಶೇರಾಪುರದ ರಾಜಪ್ಪ, ಸಹ ಕಾರ್ಯದರ್ಶಿ ಪಾಲಾಕ್ಷಪ್ಪ ಸೇರಿದಂತೆ ಶಾನಭೋಗರು, ಬಣಕಾರರು. ಬಾಬುದಾರರು ಮತ್ತು ಮಾಜಿ ಸಮಿತಿಯವರು, ಪ್ರಮುಖ ಮುಖಂಡರು ಹಗಲು ರಾತ್ರಿ ಎನ್ನದೆ ಶ್ರಮವಹಿಸಿ, ಉತ್ಸವದ ಸಿದ್ದತೆಯಲ್ಲಿ ತೊಡಗಿಸಿಕೊಂಡಿದ್ದಾರೆ.

# ಉಕ್ರೇನ್ ವೈದ್ಯ ವಿದ್ಯಾರ್ಥಿಗಳ ಕಲಿಕೆಗೆ ಅವಕಾಶ : ಸುಧಾಕರ್

**ರಾಜ್ಯದ 60 ಮೆಡಿಕಲ್ ಕಾಲೇಜುಗಳಲ್ಲಿ ಉಚಿತ ಕಲಿಕೆ ಮುಂದುವರಿಕೆ**

**ವಿದ್ಯಾರ್ಥಿಗಳ ಭವಿಷ್ಯ ರೂಪಿಸಲು ಉನ್ನತ ಮಟ್ಟದ ಸಮಿತಿ ರಚನೆ**



ಬೆಂಗಳೂರು, ಮಾ. 21 - ಉಕ್ರೇನ್ ನಿಂದ ಹಿಂದಿರುಗಿದ ವೈದ್ಯ ವಿದ್ಯಾರ್ಥಿಗಳ ಭವಿಷ್ಯ ರೂಪಿಸಲು, ರಾಜ್ಯದ ಮೆಡಿಕಲ್ ಕಾಲೇಜುಗಳಲ್ಲೇ ಅವರ ಕಲಿಕೆ ಮುಂದುವರೆಸುವ ಮಹತ್ವದ ತೀರ್ಮಾನವನ್ನು ರಾಜ್ಯ ಸರ್ಕಾರ ಕೈಗೊಂಡಿದೆ.

ವಿಧಾನಸೌಧದಲ್ಲಿ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಅವರು ವಿದ್ಯಾರ್ಥಿಗಳೊಂದಿಗೆ ನಡೆಸಿದ ಸಭೆಯಲ್ಲಿ, ಈ ಕುರಿತು ತೀರ್ಮಾನ ಕೈಗೊಳ್ಳಲಾಗಿದೆ. ಜೊತೆಗೆ ವಿದ್ಯಾರ್ಥಿಗಳ ಭವಿಷ್ಯ ರೂಪಿಸಲು ಉನ್ನತ ಮಟ್ಟದ ಸಮಿತಿ ರಚಿಸಲು ತೀರ್ಮಾನಿಸಲಾಗಿದೆ.

ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವ ಡಾ.ಕೆ.ಸುಧಾಕರ್, ಉಕ್ರೇನ್ ಹಾಗೂ ರಷ್ಯಾ ನಡುವೆ ನಿರಂತರವಾಗಿ ಯುದ್ಧ ನಡೆಯುತ್ತಿದೆ. ಅಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ 700 ಕ್ಕೂ ಅಧಿಕ ವಿದ್ಯಾರ್ಥಿಗಳನ್ನು ರಾಜ್ಯಕ್ಕೆ ಸುರಕ್ಷಿತವಾಗಿ ಕರೆತರಲಾಗಿದೆ. ಅವರ ಶೈಕ್ಷಣಿಕ ಭವಿಷ್ಯ ರೂಪಿಸುವ ಬಗ್ಗೆ ಅವರೊಂದಿಗೆ ಚರ್ಚಿಸಿ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚನೆ ನೀಡಿದ್ದರು. ಅದರಂತೆ ಚರ್ಚೆ ನಡೆಸಿದ್ದು, ತಾತ್ಕಾಲಿಕವಾಗಿ ಒಂದು ಅಭಿಪ್ರಾಯಕ್ಕೆ ಬರಲಾಗಿದೆ ಎಂದು ವಿವರಿಸಿದರು.

ಮೊದಲ ವರ್ಷದಿಂದ ಆರಂಭವಾಗಿ ಅಂತಿಮ ವರ್ಷದ ಎಂಬಿಬಿಎಸ್ ವಿದ್ಯಾರ್ಥಿಗಳು ಇಲ್ಲಿದ್ದಾರೆ. ರಾಜ್ಯದಲ್ಲಿ 60 ಮೆಡಿಕಲ್ ಕಾಲೇಜುಗಳಿವೆ. ಈ ವಿದ್ಯಾರ್ಥಿಗಳು ಈ ಕಾಲೇಜುಗಳಲ್ಲಿ ತಮ್ಮ ವ್ಯಾಸಂಗವನ್ನು ಆಯಾ ವರ್ಷದಲ್ಲೇ ಮುಂದುವರಿಸುವಂತೆ ಕ್ರಮ ವಹಿಸುವಂತೆ ತೀರ್ಮಾನಿಸಲಾಗಿದೆ. ಈಗ ನಡೆಯುತ್ತಿರುವ ತರಬೇತಿಯನ್ನೇ ಮುಂದುವರಿಸಲಾಗುವುದು ಎಂದು ತಿಳಿಸಿದರು.

ಇದರ ಜೊತೆಗೆ ಒಂದು ಸಮಿತಿಯನ್ನು ರಚಿಸಲು ತೀರ್ಮಾನಿಸಲಾಗಿದೆ. ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ, ನಿರ್ದೇಶಕರು ಹಾಗೂ ಮೆಡಿಕಲ್ ಕಾಲೇಜುಗಳ ಕೆಲ ಡೀನ್‌ಗಳನ್ನೊಳಗೊಂಡ ಉನ್ನತ ಮಟ್ಟದ ಸಮಿತಿ ರಚಿಸಲಾಗುವುದು. (5ನೇ ಪುಟಕ್ಕೆ)

## ಶುಲ್ಕ ಇಲ್ಲ, ಅಧಿಕೃತ ನೋಂದಣಿಯೂ ಇಲ್ಲ

ಸದ್ಯಕ್ಕೆ ರಾಜ್ಯದ ಮೆಡಿಕಲ್ ಕಾಲೇಜುಗಳಲ್ಲಿ ಈ ವಿದ್ಯಾರ್ಥಿಗಳನ್ನುಅಧಿಕೃತವಾಗಿನೋಂದಣಿಮಾಡಿಕೊಳ್ಳುತ್ತಿಲ್ಲ. ಆದರೆ ಅವರ ಕಲಿಕೆ, ತರಬೇತಿಯನ್ನು ಇಲ್ಲಿ ಮುಂದುವರಿಸಲಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಯಾವುದೇ ಶುಲ್ಕ ಪಾವತಿ ಮಾಡಬೇಕಿಲ್ಲ. ಉಚಿತವಾಗಿಯೇ ಶಿಕ್ಷಣ ಮುಂದುವರಿಸಬಹುದು ಎಂದು ಸಚಿವ ಡಾ.ಕೆ.ಸುಧಾಕರ್ ಸ್ಪಷ್ಟಪಡಿಸಿದರು.

ಸಮಿತಿಯಿಂದ ಕೇಂದ್ರ ಸರ್ಕಾರಕ್ಕೆ ಎಲ್ಲ ಬಗೆಯ ಮನವಿಗಳನ್ನು ಸಲ್ಲಿಸಲಾಗುವುದು. ಈ ವಿಚಾರದಲ್ಲಿ ಕೇಂದ್ರ ಸರ್ಕಾರವೇ ತೀರ್ಮಾನ ಕೈಗೊಳ್ಳಲಿದೆ ಎಂದರು.

# ಚೀನಾದಲ್ಲಿ ವಿಮಾನ ಪತನ: 132 ಸಾವು

ನವದೆಹಲಿ, ಮಾ. 21 – ಚೀನಾ ಈಸ್ಟರ್ನ್ ಏರ್‌ಲೈನ್ಸ್‌ನ ಬೋಯಿಂಗ್ 737 ವಿಮಾನ ಚೀನಾದಲ್ಲಿ ಪತನಗೊಂಡು, ಅದರಲ್ಲಿದ್ದ 132 ಜನ ಸಾವನ್ನಪ್ಪಿದ್ದಾರೆ. ಈ ಹಿನ್ನೆಲೆಯಲ್ಲಿ ಭಾರತದಲ್ಲಿರುವ ಈ ವಿಮಾನಗಳ ಬಗ್ಗೆ ಹೆಚ್ಚಿನ ನಿಗಾ ವಹಿಸಲಾಗಿದೆ ಎಂದು ವೈಮಾನಿಕ ನಿಯಂತ್ರಕ ಡಿ.ಜಿ.ಸಿ.ಎ. ಮುಖ್ಯಸ್ಥ ಅರುಣ್ ಕುಮಾರ್ ಹೇಳಿದ್ದಾರೆ. ಸ್ಪೈಸ್‌ಜೆಟ್, ವಿಸ್ತಾರ, ಏರ್ ಇಂಡಿಯಾ ಹಾಗೂ ಏರ್ ಇಂಡಿಯಾ ಎಕ್ಸ್‌ಪ್ರೆಸ್‌ಗಳು ಬೋಯಿಂಗ್ 737 ವಿಮಾನಗಳನ್ನು ಹೊಂದಿವೆ.

ಸೋಮವಾರ ಚೀನಾದಲ್ಲಿ ವಿಮಾನ ಪತನಗೊಂಡಿತ್ತು. ಈ ಬಗ್ಗೆ ಪ್ರತಿಕ್ರಿಯಿಸಿರುವ ಕುಮಾರ್, ಸುರಕ್ಷತೆ ಗಂಭೀರ ವಿಷಯವಾಗಿದೆ. ನಾವು ಪರಿಸ್ಥಿತಿಯ ಅಧ್ಯಯನ ನಡೆಸುತ್ತಿದ್ದೇವೆ. 737 ವಿಮಾನಗಳ ಮೇಲೆ ಹೆಚ್ಚಿನ ನಿಗಾ ವಹಿಸಲಾಗುವುದು ಎಂದಿದ್ದಾರೆ.

ಚೀನಾದ ಕುನ್ಮಿಂಗ್‌ನಿಂದ ಗ್ವಾಂಗ್‌ಝೌಗೆ ತೆರಳುತ್ತಿದ್ದ ವಿಮಾನ ಟೆಂಗ್ಸಿಯಾನ್ ಕೌಂಟಿಯ ವುಝೌ ನಗರದಲ್ಲಿ ಪತನಗೊಂಡಿತ್ತು. ಅದರಲ್ಲಿದ್ದ 123 ಪ್ರಯಾಣಿಕರು ಹಾಗೂ 9 ಸಿಬ್ಬಂದಿ ಸಾವನ್ನಪ್ಪಿದ್ದರು.

ಅಮೆರಿಕದ ಬೋಯಿಂಗ್ ಕಂಪನಿಯು 737 ಮ್ಯಾಕ್ಸ್ ವಿಮಾನಗಳನ್ನು ಉತ್ಪಾದಿಸುತ್ತಿದೆ. ಅಕ್ಟೋಬರ್ 2018ರಿಂದ ಮಾರ್ಚ್ 2019ರ ನಡುವೆ ಬೋಯಿಂಗ್ 737 ಮ್ಯಾಕ್ಸ್ ವಿಮಾನಗಳ ಅಪಘಾತಗಳಲ್ಲಿ 346 ಜನ ಸಾವನ್ನಪ್ಪಿದ್ದರು. ನಂತರ ಮಾರ್ಚ್ 2019ರಲ್ಲಿ 737 ಮ್ಯಾಕ್ಸ್ ವಿಮಾನಗಳನ್ನು ಡಿ.ಜಿ.ಸಿ.ಎ. ನಿಷೇಧಿಸಿತ್ತು.

## ಭಾರತದಲ್ಲಿ ಬೋಯಿಂಗ್ 737 ವಿಮಾನಗಳ ಮೇಲೆ ಹೆಚ್ಚಿನ ನಿಗಾ

ವಿಮಾನದ ತಂತ್ರಾಂಶದಲ್ಲಿ ಅಗತ್ಯ ಬದಲಾವಣೆ ಮಾಡಿದ ನಂತರ ಕಳೆದ ವರ್ಷ ಆಗಸ್ಟ್‌ನಲ್ಲಿ ಮತ್ತೆ ವಿಮಾನಗಳ ಹಾರಾಟಕ್ಕೆ ಅನುಮತಿ ನೀಡಲಾಗಿತ್ತು.

## ಸ್ವಗ್ರಾಮ ಚಳಗೇರಿಗೆ ನವೀನ್ ಪಾರ್ಥಿವ ಶರೀರ

**(1ನೇ ಪುಟದಿಂದ)** ಕಣ್ಣಿಂದ ನೋಡಿದ್ದಾರೆ. ಮತ್ತೆ ಅಲ್ಲಿಗೆ ಓದಲು ಹೋಗಲು ಹೆದರುತ್ತಿದ್ದಾರೆ. ಕಾರಣ ಸರ್ಕಾರ ಅವರ ವಿದ್ಯಾಭ್ಯಾಸಕ್ಕೆ ಇಲ್ಲಿಯೇ ಸೂಕ್ತ ಕ್ರಮ ಜರುಗಿಸಬೇಕು ಎಂದು ನವೀನ್ ತಂದೆ ಮುಖ್ಯಮಂತ್ರಿಗಳಿಗೆ ಒತ್ತಾಯಿಸಿದರು.

# ದಲಿತ ಸಂಘರ್ಷ ಸಮಿತಿ ಹುಟ್ಟಿಗೆ ಪ್ರೊ. ಕೃಷ್ಣಪ್ಪ ಕಾರಣ

**ನಗರದಲ್ಲಿನ ಡಿಎಸ್‌ಎಸ್ ಸಮಾವೇಶದಲ್ಲಿ ಪ್ರಗತಿಪರ ಚಿಂತಕ ಕೋಟಗಾನಹಳ್ಳಿ ರಾಮಣ್ಣ**

ದಾವಣಗೆರೆ, ಮಾ. 21- ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿ ಹುಟ್ಟಿಗೆ ಪ್ರೊ. ಬಿ. ಕೃಷ್ಣಪ್ಪ ಕಾರಣರಾದರು. ಸಂಘಟನೆಯ ಮೊದಲ ರಾಜ್ಯಾಧ್ಯಕ್ಷರಾಗಿ ಆಯ್ಕೆಯಾಗುವ ಮೂಲಕ ದಲಿತ ಚಳವಳಿಗೆ ಹೊಸ ಸ್ವರೂಪವನ್ನು ಕೊಟ್ಟರು. ಹೋರಾಟ ಮತ್ತು ನುಡಿ ಇವೆರಡೂ ಬಿಕೆಯವರ ಮೂಲಮಂತ್ರಗಳಾಗಿದ್ದವು ಎಂದು ಕೋಲಾರದ ಪ್ರಗತಿಪರ ಚಿಂತಕ ಕೋಟಗಾನಹಳ್ಳಿ ರಾಮಣ್ಣ ಹೇಳಿದರು.

ನಗರದ ಶ್ರೀಮತಿ ಪಾರ್ವತಮ್ಮ ಶಾಮನೂರ ಶಿವಶಂಕರಪ್ಪ ಕಲ್ಯಾಣ ಮಂಟಪದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ. ಬಿ. ಕೃಷ್ಣಪ್ಪ ಸ್ಥಾಪಿತ) ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಪದಾಧಿಕಾರಿಗಳು ಮತ್ತು ಕಾರ್ಯಕರ್ತರ ಸಮಾವೇಶದ ಗೋಷ್ಠಿಯಲ್ಲ 'ಪ್ರೊ. ಬಿ. ಕೃಷ್ಣಪ್ಪ ಮತ್ತು ದಲಿತ ಚಳವಳಿ ಹೋರಾಟದ ದಾರಿ ಮತ್ತು ಗುರಿ' ವಿಷಯ ಕುರಿತು ಮಾತನಾಡಿದರು.

ದಲಿತ ಸಂಘರ್ಷ ಸಮಿತಿ ಕೇವಲ ಸಂಘಟನಾತ್ಮಕ ಗುಂಪು ಮಾತ್ರವಲ್ಲ. ನೊಂದವರ, ಅಮಾಯಕರ, ಬಡವರ, ಶೋಷಿತರ ಕಣ್ಣೀರು ಒರೆಸಿದ ಸಂಘಟನೆ. ಅನ್ಯಾಯದ ವಿರುದ್ಧ ಸಿಡಿದು ಪ್ರಭುತ್ವವನ್ನೇ ನಡುಗಿಸಿ, ಎಲ್ಲಾ ತಾರತಮ್ಯಗಳ ವಿರುದ್ಧ ಬಂಡೆದ್ದ ಸಂಘಟನೆ ಎಂದರು.

ಕೃಷ್ಣಪ್ಪ ಅವರ ಬದುಕು ಮತ್ತು ಹೋರಾಟ ಇಂದಿನ ಪ್ರತಿಯೊಬ್ಬರಿಗೂ ಸ್ಫೂರ್ತಿ ನೀಡುವಂತಿದೆ ಅವರು ಸ್ಮರಿಸಿದರು.

ಆದರೆ ಪ್ರಸ್ತುತ ವಿಶಾಲ ಮತ್ತು ಬಲಿಷ್ಠ ದಲಿತ ಚಳವಳಿಯನ್ನು ಸಮರ್ಥವಾಗಿ ಮುನ್ನಡೆಸುವಲ್ಲಿ ವಿಫಲರಾಗಿದ್ದೇವೆ. ದಲಿತ ನಾಯಕರು ಆತ್ಮವಿಮರ್ಶೆ ಮಾಡಿಕೊಳ್ಳುವ ಅಗತ್ಯವಿದೆ ಎಂದು ಹೇಳಿದರು.

1970 ರಲ್ಲಿ ಭಾರತ ದೇಶ ಗುರುತು ರಾಜಕಾರಣಕ್ಕೆ ನಾಂದಿಯಾಯಿತು, ಪ್ರೇರಣೆಯಾಯಿತು. ಅಲ್ಲಿಂದ ಇದುವರೆಗೂ ಗುರುತು ರಾಜಕಾರಣವನ್ನು ಮುಂದಿಟ್ಟುಕೊಂಡು ನಡೆಯುತ್ತಾ ಬಂದಿದ್ದೇವೆ. ಆದರೆ ಅನೇಕ ವರ್ಷಗಳ ಹಿಂದೆ ವಿಶಾಲವಾದ ವ್ಯಾಪ್ತಿಯಲ್ಲಿ ಕಟ್ಟಿದ 'ದಲಿತ' ಎಂಬ ಸೂರು ಚಿಂದಿಯಾಗಿದೆ, ಜಾತಿ ಮತ್ತು ಉಪಜಾತಿಗಳಲ್ಲಿ ಗುರುತಿಸಿಕೊಳ್ಳುವಂತಾಗಿದೆ ಎಂದರು.

ನಮ್ಮ ಮುಂದೆ ಇರುವುದು ಪ್ರಬುದ್ಧ ಭಾರತ ಮತ್ತು ಪೇಶ್ವೆ ಭಾರತ. ದಲಿತ ಚಳವಳಿಯನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ದಲಿತ ನಾಯಕರು ಚಿಂತನೆ ನಡೆಸಬೇಕಾಗಿದೆ. ದಲಿತ ಎಂಬ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾಗಿದೆ. ಇದನ್ನು ಕಾರ್ಯಕರ್ತರ ಮಟ್ಟದಿಂದ ಕಟ್ಟಬೇಕಾಗಿದೆ ಎಂದು ಕರೆ ನೀಡಿದರು.

ದಲಿತ ಚಳವಳಿಗೆ ಸಂವಿಧಾನವಿಲ್ಲ. ಪ್ರಣಾಳಿಕೆ ಇಲ್ಲವಾಗಿದೆ. ಅಕ್ಷರಬಲ್ಲ ನಾವು ಕಾರ್ಯಕರ್ತರ ಸಂಘಟನೆಗಳನ್ನು ಬೌದ್ಧಿಕವಾಗಿ ತಯಾರು ಮಾಡಬೇಕಾಗಿದೆ. ಎಲ್ಲರನ್ನು ಪ್ರಜ್ಞಾವಂತರನ್ನಾಗಿಸುವ ಪ್ರಯತ್ನ ಮಾಡಬೇಕಾಗಿದೆ ಎಂಬ ಆಶಯ ವ್ಯಕ್ತಪಡಿಸಿದರು.

ಬೆಂಗಳೂರು ನ್ಯಾಷನಲ್ ಕಾಲೇಜು ಸಹಾಯಕ ಪ್ರಾಧ್ಯಾಪಕ ವಿ.ಎಲ್. ನರಸಿಂಹಮೂರ್ತಿ ಅವರ 'ಚರಿತ್ರೆಯ ಕಣ್ಣಲ್ಲಿ ದಲಿತರು'ಹಾಗೂ ಪ್ರಗತಿಪರ ಚಿಂತಕ ಕೋಟಗಾನಹಳ್ಳಿ ರಾಮಣ್ಣ ಅವರ 'ಪ್ರೊ. ಕೃಷ್ಣಪ್ಪ ಮತ್ತು ದಲಿತ ಚಳವಳಿ ಹೋರಾಟದ ದಾರಿ ಮತ್ತು ಗುರಿ' ವಿಚಾರಗಳಿಗೆ ಪ್ರಾಧ್ಯಾಪಕ ಡಾ. ಮಂಜಣ್ಣ ಅವರು ಪ್ರತಿಕ್ರಿಯಿಸಿದರು.

ಕುವೆಂಪು ವಿವಿ ವಿಶ್ರಾಂತ ಪ್ರಾಧ್ಯಾಪಕ ಡಾ. ಸಣ್ಣರಾಮ ಅವರು ಜಂಟಿ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ದಸಂಸ ರಾಜ್ಯ ಸಂಚಾಲಕ ಎಂ. ಗುರುಮೂರ್ತಿ, ಪ್ರೊ.ರಾಜು, ಪಕ್ಕೀರಪ್ಪ ಮುಂಡಗೋಡ, ಬಿ.ಎನ್. ಗಂಗಾಧರಪ್ಪ, ರತ್ನಮ್ಮ ಜೀವಿಕ ಮತ್ತಿತರರು ಉಪಸ್ಥಿತರಿದ್ದರು.

# ಸೋತರೂ ಸಿಎಂ ಆಗಿ ಧಾಮಿ ಮುಂದುವರಿಕೆ



ಡೆಹರಾಡೂನ್, ಮಾ.21 – ಉತ್ತರಾಖಂಡ ವಿಧಾನಸಭಾ ಚುನಾವಣೆಯಲ್ಲಿ ಸೋತರೂ, ಪುಷ್ಕರ್ ಸಿಂಗ್ ಧಾಮಿ ಅವರನ್ನು ಮುಖ್ಯಮಂತ್ರಿಯಾಗಿ ಮುಂದುವರೆಸಲು ಬಿಜೆಪಿ ನಿರ್ಧರಿಸಿದೆ.

ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸ್ಪಷ್ಟ ಬಹುಮತ ಗಳಿಸಿತ್ತು. ಆದರೆ, ಸ್ವತಃ ಧಾಮಿ ಚುನಾವಣೆಯಲ್ಲಿ ಪರಾಭವಗೊಂಡಿದ್ದರು. ಸೋಮವಾರ ಅವರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಪುನರಾಯ್ಕೆ ಮಾಡಲಾಗಿದೆ.

ಕಳೆದ ವರ್ಷ ಜುಲೈನಲ್ಲಿ ಧಾಮಿ ಅವರನ್ನು ಉತ್ತರಾಖಂಡದ ಮುಖ್ಯಮಂತ್ರಿಯಾಗಿ ನೇಮಿಸಲಾಗಿತ್ತು. ರಾಜ್ಯ ವಿಧಾನಸಭಾ ಚುನಾವಣೆ ಕೆಲವೇ ತಿಂಗಳಿರುವಾಗ ಅವರ ನೇಮಕ ಮಾಡಲಾಗಿತ್ತು. ಇದಕ್ಕೂ ಮುಂಚೆ ತ್ರಿವೇಂದ್ರ ಸಿಂಗ್ ರಾವತ್ ಹಾಗೂ ತೀರಥ್ ಸಿಂಗ್ ರಾವತ್ ಅವರು ಮುಖ್ಯಮಂತ್ರಿಗಳಾಗಿದ್ದರು. ತಮ್ಮ ಮೇಲೆ ಹೈಕಮಾಂಡ್ ಇಟ್ಟುಕೊಂಡಿದ್ದ ವಿಶ್ವಾಸ ಉಳಿಸಿಕೊಂಡಿದ್ದ ಧಾಮಿ, 21 ವರ್ಷಗಳ ಇತಿಹಾಸದಲ್ಲಿ ಮೊದಲ ಬಾರಿಗೆ ಅಧಿಕಾರಾರೂಢ ಪಕ್ಷ ಸತತ ಎರಡನೇ ಬಾರಿ ಅಧಿಕಾರಕ್ಕೆ ಬರುವಂತೆ ಮಾಡಿದ್ದರು. ಆದರೆ, ಸ್ವತಃ ಕ್ಷೇತ್ರವಾದ ಖತಿಮಾದಲ್ಲಿ ಧಾಮಿ 6,500 ಮತಗಳ ಸೋಲು ಕಂಡಿದ್ದರು.

45 ವರ್ಷದ ಧಾಮಿ, ರಾಜ್ಯದ ಅತ್ಯಂತ ಯುವ ಮುಖ್ಯಮಂತ್ರಿಯಾಗಿದ್ದಾರೆ. ರಾಜ್ಯದಲ್ಲಿ ಬಿಜೆಪಿ ಸರಣಿ ಸಮಸ್ಯೆಗಳನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಅವರು ಅಧಿಕಾರದ ಚುಕ್ಕಾಣಿ ಹಿಡಿದಿದ್ದರು. ಚುನಾವಣೆ ಸನಿಹದಲ್ಲಿದ್ದ ಕಾರಣ, ಧಾಮಿ ಸ್ವಂತ ಕ್ಷೇತ್ರದ ಕಡೆ ಹೆಚ್ಚು ಗಮನ ಹರಿಸಲು ಸಾಧ್ಯವಾಗಿರಲಿಲ್ಲ.

ಇದೇ ವೇಳೆ ಗೋವಾದ ಮುಖ್ಯಮಂತ್ರಿಯಾಗಿ ಪ್ರಮೋದ್ ಸಾವಂತ್ ಅವರನ್ನು ಮುಂದುವರೆಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ.



## ಬನ್ನಿ...ಬನ್ನಿ... ಸ್ವಾಗತ...

ಬರುವ ವಿಧಾನಸಭಾ ಚುನಾವಣೆಯಲ್ಲಿ ದಾವಣಗೆರೆ ಉತ್ತರ ಕ್ಷೇತ್ರದಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸ್ಪರ್ಧಿಸುತ್ತಾರೆಂಬ ಸುದ್ದಿಗಳು ಕೇಳಿ ಬರುತ್ತಿವೆ. ಸೋಮವಾರ ನಗರಕ್ಕೆ ಬಂದಿದ್ದ ಮುಖ್ಯಮಂತ್ರಿಗಳನ್ನು ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕ ಎಸ್.ಎ. ರವೀಂದ್ರನಾಥ್ ಸ್ವಾಗತಿಸಿದರು. ಈ ಚಿತ್ರಕ್ಕೂ ಸ್ಪರ್ಧೆಗೂ ಸಂಬಂಧವಿಲ್ಲವಾದರೂ, 'ಹಾಲಿ ಹಾಗೂ ಭಾವಿ'ಗಳ ಮಿಲನ ಎನ್ನಬಹುದು.

## ಬಸವನಾಳ್‌ನಲ್ಲಿ ಬಸವೇಶ್ವರ ರಥೋತ್ಸವ ಇಂದು

ದಾವಣಗೆರೆ ತಾಲ್ಲೂಕಿನ ಆನೆಕೊಂಡದ ಬಸವೇಶ್ವರ ಸ್ವಾಮಿ ರಥೋತ್ಸವ ಹಾಗೂ ಬಸವನಾಳು ಗ್ರಾಮದ ಶ್ರೀ ಬಸವೇಶ್ವರ ಸ್ವಾಮಿ ರಥೋತ್ಸವ ಇಂದು ಸಂಜೆ 5.30 ಕ್ಕೆ ಜರುಗುವುದು.

ಇಂದು ಬೆಳಿಗ್ಗೆ ಕಳಸಾರೋಹಣ ಹಾಗೂ ಕಂಕಣಧಾರಣೆ ಹಾಗೂ ಸಂಜೆ 5.30 ಕ್ಕೆ ಶ್ರೀ ಬಸವೇಶ್ವರ ಸ್ವಾಮಿಯ ರಥೋತ್ಸವ ನೆರವೇರುವುದು. ನಾಳೆ ಬುಧವಾರ ಮಧ್ಯಾಹ್ನ ಬೆಲ್ಲದ ಬಂಡಿ ಉತ್ಸವ ಹಾಗೂ ಸಂಜೆ ಓಕಳಿ ಕಾರ್ಯಕ್ರಮ ನಡೆಯುವುದು. ಭಕ್ತಾದಿಗಳು ಆಗಮಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗಲು ಶ್ರೀ ಬಸವೇಶ್ವರ ದೇವಸ್ಥಾನ ಕಮಿಟಿ ತಿಳಿಸಿದೆ.

ದಿ. 23 ರ ರಾತ್ರಿ 10 ಗಂಟೆಗೆ 'ಸತಿ ಸಂಸಾರದ ಜ್ಯೋತಿ' ಎಂಬ ಸಾಮಾಜಿಕ ನಾಟಕ ಬಸವ ಕಲಾಲೋಕ ಬಸಾಪುರ ಇವರಿಂದ ಪ್ರದರ್ಶನಗೊಳ್ಳಲಿದೆ.


**ANVITH ENTERPRISES**
**FINANCIAL ADVISOR®**
P.J. EXTENSION, DAVANGERE-577 004.
1) ಸುರಕ್ಷಿತ ಮತ್ತು ಭದ್ರತೆಯೊಂದಿಗೆ ಹೂಡಿಕೆ ಮುಖಾಂತರ ವಾರ್ಷಿಕವಾಗಿ (8 ರಿಂದ 12%) ಲಾಭಾಂಶವನ್ನು ಪಡೆಯಲು
2) ಪ್ರತಿ ತಿಂಗಳ ಸಾಲದ EMI ನಿಂದ ಮುಕ್ತರಾಗಿ ಮಕ್ಕಳ ಶಿಕ್ಷಣ ಮತ್ತು ನಿಮ್ಮ ನಿವೃತ್ತಿ ಜೀವನದ ನೆಮ್ಮದಿಯ ದಿನಗಳಿಗಾಗಿ ಉಳಿತಾಯದ ಹೆಜ್ಜೆಗೆ ಸಾಗಲು Children's Savings Plans, Retirement Plans, Income-Tax Saving Plans, Health plans, Term Plans ಹಾಗೂ ಆರ್ಥಿಕವಾಗಿ ಸಬಲರಾಗಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.
**ಮೊ. ನಂ : 87926 73593**



**ಶ್ರೀ ಕೆಂಚಾಂಬ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ**
ಕೆಂಚಾಂಬ ಸಂಕೀರ್ಣ, ಕಾಲೇಜು ರಸ್ತೆ, ನಿಟ್ಟುವಳ್ಳಿ, ದಾವಣಗೆರೆ - 577 004
**ಪಿಗ್ಮಿ ಏಜೆಂಟರು ಬೇಕಾಗಿದ್ದಾರೆ.**
ಈ ಮೇಲ್ಕಂಡ ಸಂಸ್ಥೆಯಲ್ಲಿ ದಿನವಹಿ ಪಿಗ್ಮಿ ಸಂಗ್ರಹಣೆಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಆಸಕ್ತರು ಈ ಕೆಳಕಂಡ ನಿಬಂಧನೆಗೊಳಪಟ್ಟು. ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 30.3.2022.
**ಅರ್ಹತೆಗಳು :**
1) ವಯೋಮಾನ ಕನಿಷ್ಠ 18 ವರ್ಷಗಳು, ಗರಿಷ್ಠ 50 ವರ್ಷಗಳು.
2) ವಿದ್ಯಾರ್ಹತೆ : ಕನಿಷ್ಠ ಎಸ್.ಎಸ್.ಎಲ್.ಸಿ.
3) ಪಿಗ್ಮಿ ಸಂಗ್ರಹಣೆ / ನಿರ್ವಹಣೆ ಬಲ್ಲವರಾಗಿರಬೇಕು.
"ನಿರ್ದೇಶಕ ಮಂಡಲಿಯ ಅಪ್ಪಣೆಯ ಮೇರೆಗೆ"
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.
**94484 48600 , 98440 05244**


# ನಾಲ್ಕನೇ ಅಲೆ ಎದುರಾದರೂ ಹೆದರಬೇಕಿಲ್ಲ

**ಸಭೆ, ಸಮಾರಂಭಗಳಲ್ಲಿ ಮಾಸ್ಕ್ ಕಡ್ಡಾಯಕ್ಕೆ ಶೀಘ್ರ ತೀರ್ಮಾನ : ಸುಧಾಕರ್**

ಬೆಂಗಳೂರು, ಮಾ. 21- ನಮ್ಮಲ್ಲಿ ಲಸಿಕೆ ಅಭಿಯಾನ ಉತ್ತಮವಾಗಿದೆ. ಕೊರೊನಾದ ನಾಲ್ಕನೇ ಅಲೆ ಎದುರಾದರೂ ಸಾರ್ವಜನಿಕರು ಹೆದರುವ ಅಗತ್ಯವಿಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಕೆ. ಸುಧಾಕರ್ ಹೇಳಿದ್ದಾರೆ.

ವಿಧಾನ ಪರಿಷತ್‌ನಲ್ಲಿಂದು ಶೂನ್ಯ ವೇಳೆಯಲ್ಲಿ ಶಿಶಿಲ್ ನಮೋಶಿ ಅವರ ಪ್ರಸ್ತಾವಕ್ಕೆ ಉತ್ತರ ನೀಡುವ ಸಂದರ್ಭದಲ್ಲಿ ಮಾತನಾಡಿದ ಅವರು, ಸಾಂಕ್ರಾಮಿಕದ ಭೀತಿ ನಮಗೆ ಎದುರಾಗಬಹುದು ಎಂದು ವಿಶ್ವಸಂಸ್ಥೆ ಮುನ್ಸೂಚನೆ ನೀಡಿದೆ ಎಂದರು.

ನಮ್ಮಲ್ಲಿ ಲಸಿಕೆ ಅಭಿಯಾನ ಉತ್ತಮವಾಗಿದೆ, ನಾಲ್ಕನೇ ಅಲೆ ಎದುರಾದರೂ ಸಾರ್ವಜನಿಕರು ಹೆದರುವ ಅಗತ್ಯವಿಲ್ಲ, ಮುನ್ನೆಚ್ಚರಿಕೆಯಾಗಿ ಒಳಾಂಗಣ ಸಭೆ-ಸಮಾರಂಭಗಳಲ್ಲಿ ಮಾಸ್ಕ್ ಕಡ್ಡಾಯಗೊಳಿಸುವ ಬಗ್ಗೆ ಸರ್ಕಾರ ಶೀಘ್ರ ತೀರ್ಮಾನ ಕೈಗೊಳ್ಳಲಿದೆ ಎಂದವರು ಹೇಳಿದ್ದಾರೆ.

ವಿಶ್ವ ಆರೋಗ್ಯ ಸಂಸ್ಥೆ ಮುನ್ಸೂಚನೆ ನೀಡಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಭೆ ನಡೆಸಿ ಕೆಲವು ಕಠಿಣ ತೀರ್ಮಾನಗಳನ್ನು ಮೊದಲೇ ಕೈಗೊಳ್ಳಲಾಗುವುದು. ಲಸಿಕಾಕರಣದಿಂದ ಕೋವಿಡ್ ನಿಯಂತ್ರಿಸಬಹುದಾಗಿದೆ, ಆದರೂ ನಾವು ಮುನ್ನೆಚ್ಚರಿಕೆ ಕೈಗೊಳ್ಳಲೇಬೇಕಿದೆ ಎಂದು ಸಚಿವರು ಹೇಳಿದ್ದಾರೆ. ಈಗಾಗಲೇ ಮೂಲಸೌಲಭ್ಯಗಳನ್ನು ಹೆಚ್ಚಿಸಲು ಆದ್ಯತೆ ನೀಡಲಾಗಿದೆ, ಸೋಂಕು ಪತ್ತೆ ಹಚ್ಚಲು 265 ಪ್ರಯೋಗಾಲಯಗಳನ್ನು ತೆರೆದು ಪ್ರತಿನಿತ್ಯ 2.5 ಲಕ್ಷ ಮಾದರಿ ಪರೀಕ್ಷೆ ಮಾಡುವ ಸಾಮರ್ಥ್ಯ ವೃದ್ಧಿಸಿಕೊಂಡಿದ್ದೇವೆ.

ಈ ಮೊದಲ ಮೂರು ಅಲೆಗಳ ಅನುಭವದಿಂದ ವೈದ್ಯರು ಚಿಕಿತ್ಸೆ ನೀಡುವ ಅಭ್ಯಾಸ ಮಾಡಿಕೊಂಡಿದ್ದಾರೆ, ಆದ್ದರಿಂದ ನಾಲ್ಕನೇ ಅಲೆ ಬಂದರೂ ಸಾರ್ವಜನಿಕರು ಆತಂಕ ಪಡುವ ಅಗತ್ಯವಿಲ್ಲ.

ಆದರೆ, ಮುನ್ನೆಚ್ಚರಿಕೆ ಅಗತ್ಯ, ಕೇಂದ್ರ ಮತ್ತು ರಾಜ್ಯ ಸರ್ಕಾರ ಹೊರಡಿಸುವ ಕೋವಿಡ್-19 ನಿಯಮಾವಳಿಗಳನ್ನು ಚಾಚೂ ತಪ್ಪದೇ ಪಾಲನೆ ಮಾಡಬೇಕು ಎಂದವರು ಹೇಳಿದ್ದಾರೆ.

ರೂಪಾಂತರ ತಳಿಗೂ ನಮ್ಮಲ್ಲಿ ಔಷಧಿ ಇದೆ, ಈ ಹಿಂದೆ ನೀಡಿರುವ ಔಷಧಿಗಳಲ್ಲೇ ಈ ಸೋಂಕು ನಿವಾರಣೆ ಆಗುತ್ತದೆ. ಬಿ.ಎ.2 ರೂಪಾಂತರ ತಳಿಯ ಬಗ್ಗೆ ವಿಶ್ವ ಆರೋಗ್ಯ ಸಂಸ್ಥೆ ಸತತ ಅಧ್ಯಯನದಲ್ಲಿ ತೊಡಗಿಸಿಕೊಂಡಿದೆ. ಅದು ನೀಡುವ ಮಾರ್ಗದರ್ಶನದಂತೆ ನಾವು ನಡೆದುಕೊಳ್ಳಬೇಕಿದೆ ಎಂದರು.

## ದುಗ್ಗಮ್ಮನ ಜಾತ್ರೆ : ನಗರದಲ್ಲಿ ಇಂದು ಯಕ್ಷಗಾನ ಪ್ರದರ್ಶನ

ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆ ಪ್ರಯುಕ್ತ ಇಂದು ರಾತ್ರಿ 8 ಗಂಟೆಗೆ ದೇವಸ್ಥಾನದ ಮಂಟಪದಲ್ಲಿ ಯಕ್ಷರಂಗ ಯಕ್ಷಗಾನ ಸಂಸ್ಥೆಯಿಂದ ಯಕ್ಷಗಾನ ಪ್ರದರ್ಶನ ನಡೆಯಲಿದೆ ಎಂದು ಯಕ್ಷರಂಗದ ಅಧ್ಯಕ್ಷ ಮಲ್ಯಾಡಿ ಪ್ರಭಾಕರ ಶೆಟ್ಟಿ ತಿಳಿಸಿದ್ದಾರೆ.

ಬೆಂಗಳೂರಿನ ಯಕ್ಷೇಶ್ವರಿ ಯಕ್ಷಗಾನ ಸಂಸ್ಥೆಯ ವೃತ್ತಿಪರ ಕಲಾವಿದರಿಂದ ಪ್ರದರ್ಶನವಾಗುತ್ತಿರುವ ಈ ಯಕ್ಷಗಾನದ ಕಥಾನಕ ಕರ್ನಾಟಕ ಯಕ್ಷಗಾನ ಅಕಾಡೆಮಿಯ ನಿಕಟಪೂರ್ವ ಅಧ್ಯಕ್ಷರಾದ ಕೀರ್ತಿಶೇಷ ಎಂ.ಎ.ಹೆಗಡೆ ವಿರಚಿತ 'ಕುಶ-ಲವ' ಪೌರಾಣಿಕ ಕಥೆಯೊಂದಿಗೆ ನಡೆಯಲಿದೆ.

ಹಿಮ್ಮೇಳದಲ್ಲಿ ಭಾಗವತಿಕೆ ಬಲಗೋಣ ಸುಬ್ರಾಯ ಹೆಬ್ಬಾರ್, ಮದ್ದಳೆ ಕಿರಿಮಂಜೇಶ್ವರದ ಶಶಾಂಕ್ ಆಚಾರ್, ಚಂಡೆಯಲ್ಲಿ ಶ್ರೀನಿವಾಸ ಪ್ರಭು ಭಾಗವಹಿಸಲಿದ್ದಾರೆ. ಸ್ತ್ರೀಪಾತ್ರದಲ್ಲಿ ಮಾನಸ ಉಪಾಧ್ಯಾಯ, ಹಾಸ್ಯ ಪಾತ್ರವನ್ನು ಶಂಕರ ಕೊಠಾರಿಯವರು ನಿರ್ವಹಿಸಲಿದ್ದಾರೆ. ಮುಮ್ಮೇಳದಲ್ಲಿ ಪ್ರಶಾಂತ ಹೆಗಡೆ ಮೂರೂರು, ಸತ್ಯನಾರಾಯಣ ಆಚಾರ್ ಕೋಟೇಶ್ವರ, ನಾಗಶ್ರೀ ಜಿ.ಎಸ್., ನಿಹಾರಿಕ ಭಟ್, ವಜ್ರಕುಮಾರ್ ಜೈನ್, ಬೋಳಂಬಳ್ಳಿ ವಿನಾಯಕ್ ಭಟ್, ಪ್ರಸನ್ನಮಯ್ಯ ಪಾಲ್ಗೊಳ್ಳಲಿದ್ದಾರೆ.


**ಸಾರ್ವಜನಿಕ ಪ್ರಕಟಣೆ**

ಈ ಮೂಲಕ ಸಮಸ್ತ ನಾಗರಿಕರಿಗೂ ತಿಳಿಯಪಡಿಸುವುದೇನೆಂದರೆ ನಮ್ಮ ಕಕ್ಷಿದಾರರಾದ, ದಾವಣಗೆರೆ ಸಿಟಿ, ಶಿವಕುಮಾರ ಸ್ವಾಮಿ ಬಡಾವಣೆ, 3ನೇ ಮೇನ್, 3ನೇ ಕ್ರಾಸ್, ಮೊದಲನೇ ಹಂತ 'ಸಿದ್ದೇಶ್ವರ ನಿಲಯ' ಡೋರ್ ನಂ. 1862/25 ರಲ್ಲಿ ವಾಸವಾಗಿರುವ ಶ್ರೀ ಎಂ.ಪಿ. ರಮೇಶ್ ಬಿನ್ ಎಂ.ಪಿ. ಶಿವಯೋಗಪ್ಪ ವಯಸ್ಸು ಸುಮಾರು 52 ವರ್ಷ, ವ್ಯಾಪಾರಸ್ಥರು, ಆದ ಇವರು ದಾವಣಗೆರೆ ಸಿಟಿ, ಶಾಮನೂರು ಶಿವಶಂಕರಪ್ಪ ಬಡಾವಣೆ (ಎಸ್.ಎಸ್. ಲೇಔಟ್) 4ನೇ ಮೇನ್, 5ನೇ ಕ್ರಾಸ್, ಡೋರ್ ನಂ. 4664/20/7ರಲ್ಲಿ ವಾಸವಾಗಿರುವ ಶ್ರೀಮತಿ ಮಂಜುಳ ಕೋಂ ಲೇಟ್ ವಿಜಯಕುಮಾರ್ ಓ. ವಯಸ್ಸು 49 ವರ್ಷ ಇವರ ಮಕ್ಕಳಾದ ವರುಣ್ 26 ವರ್ಷ, ವರ್ಷ, 22 ವರ್ಷ ಇವರುಗಳಿಂದ ಈ ಕೆಳಗಿನ ಅನುಸೂಚಿಯಲ್ಲಿ ತೋರಿಸಲಾಗಿರುವ ಸ್ಥಿರ ಸ್ವತ್ತನ್ನು ಕ್ರಯಕ್ಕೆ ಪಡೆಯುತ್ತಿದ್ದು ಈ ಸೊತ್ತಿಗೆ ಸಂಬಂಧಿಸಿದಂತೆ ಯಾರಾದರೂ ಯಾವುದೇ ರೀತಿಯಿಂದಲೂ ತಕರಾರು ಇದ್ದಲ್ಲಿ ಅವರುಗಳು ಈ ಸೋಮವಾರದೊಳಗೆ ಅಂದರೆ ದಿನಾಂಕ 28.03.2022ರ ಒಳಗೆ ಈ ಕೆಳಕಾಣಿಸಿದ ದೂರವಾಣಿ ಸಂಖ್ಯೆಗೆ ಸಂಪರ್ಕಿಸಿ ತಮ್ಮಲ್ಲಿರುವ ಸಂದೇಹಗಳನ್ನು ಬಗೆಹರಿಸಿಕೊಳ್ಳಬಹುದಾಗಿದೆ ಮತ್ತು ತಮ್ಮಗಳ ಆಕ್ಷೇಪಣೆಗಳು ಮತ್ತು ತಕರಾರು ಏನಾದರೂ ಇದ್ದರೆ ಮೇಲೆ ತಿಳಿಸಿದ ದಿನಾಂಕದ ಒಳಗೆ ನಮ್ಮ ಕಕ್ಷಿದಾರರಿಗೆ ಅಥವಾ ಅವರ ಪರ ವಕೀಲರಿಗೆ ತಿಳಿಸಿ ತಮ್ಮ ತಕರಾರುಗಳನ್ನು ಬಗೆಹರಿಸಿಕೊಳ್ಳಬಹುದು. ನಂತರ ಬಂದ ಯಾವುದೇ ತಕರಾರುಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ ಮತ್ತು ಯಾವುದೇ ಜವಾಬ್ದಾರಿಗಳಿಗೆ ಒಳಪಡುವುದಿಲ್ಲ ಮತ್ತು ಈ ಕೆಳಗಿನ ಷೆಡ್ಯೂಲ್ ಸ್ವತ್ತು ನಮ್ಮ ಕಕ್ಷಿದಾರರಿಗೆ ಶುದ್ಧ ಕ್ರಯ ಪತ್ರಕ್ಕೆ ಹಾಗು ಹಕ್ಕು, ಮಾಲೀಕತ್ವ ಮತ್ತು ಸ್ವಾಧೀನಕ್ಕೆ ಒಳಪಡುತ್ತದೆ ಎಂದು ಈ ಮೂಲಕ ತಿಳಿಯತಕ್ಕದ್ದು.

**ಷೆಡ್ಯೂಲ್ :** ದಾವಣಗೆರೆ ಸಬ್‌ರಿಜಿಸ್ಟ್ರಾರ್‌ರವರ ಅಧಿಕಾರಕ್ಕೆ ಒಳಪಟ್ಟು, ದಾವಣಗೆರೆ ಸಿಟಿ 5ನೇ ವಾರ್ಡ್, 10ನೇ ಡಿವಿಜನ್, ಎಂಸಿಸಿ 'ಬಿ' ಬ್ಲಾಕ್, 3ನೇ ಮೇನ್, 4ನೇ ಕ್ರಾಸ್, (ಗುಂಡಿ ಮಹಾದೇವಪ್ಪ ಛತ್ರದಿಂದ ಒಳ ಭಾಗದ ನೀರಿನ ಟ್ಯಾಂಕ್ ಪೂರ್ವ ಭಾಗ) ದಲ್ಲಿ ಬರತಕ್ಕ ದಾವಣಗೆರೆ ನಗರ ಮಾಪನ ಕಛೇರಿ ವಿಭಾಗದ ಸಂಖ್ಯೆ 8 ಸಿಟಿ ಸರ್ವೆ ನಂ.1338 ಸವಿಸ್ತಾರ ನಕಾಶೆ ಸಂಖ್ಯೆ 145 ಟೆನ್ಯೂರ್ "ಎ" ಎಂದು ದಾಖಲಾಗಿರುವ ಮುನ್ಸಿಪಲ್ ನಿವೇಶನ ನಂ. 229/ಬಿ, ಚಾಲ್ತಿ ಡೋರ್ ನಂ. 2810 ಖಾತೆ ನಂ. 583 ಅಳತೆ ಪೂರ್ವ-ಪಶ್ಚಿಮ 60 ಅಡಿ, ಉತ್ತರ-ದಕ್ಷಿಣ 44 ಅಡಿ (60x44) ವುಳ್ಳ ಖಾಲಿ ಜಾಗ, ಈ ಜಾಗದಲ್ಲಿ ನನ್ನ ಸ್ವಂತ ಖರ್ಚಿನಿಂದ ಕಟ್ಟಿಸಿರುವ ಆರ್‌ಸಿಸಿ ಡೂಪ್ಲೆಕ್ಸ್ ವಾಸದ ಮನೆ, ಈ ಮನೆಗೆ ಎಇಹೆಚ್ ವಿದ್ಯುಚ್ಛಕ್ತಿ ಸೌಕರ್ಯ, ನಲ್ಲಿ ನೀರಿನ ಸೌಕರ್ಯ, ಬೋರ್ ವೆಲ್ ಸೌಕರ್ಯ ಹಾಗು ಸೋಲಾರ್ ಸಹ ಅಳವಡಿಸಿರುವ ಹಾಗು ಶೌಚಾಲಯ ಸೌಕರ್ಯ ಒಳಗೊಂಡ ಜಾಗ ಮತ್ತು ವಾಸದ ಮನೆ ಸೇರಿ ಒಟ್ಟು ಚಕ್ಕುಬಂದಿ: **ಪೂರ್ವಕ್ಕೆ** :- 3ನೇ ಮುಖ್ಯ ರಸ್ತೆ, **ಪಶ್ಚಿಮಕ್ಕೆ** :- ಬೆಟ್ಟಪ್ಪ ಮತ್ತು ವಗೈರೆಯವರ ಹಾಲಿ ಮನೆಗಳು **ಉತ್ತರಕ್ಕೆ**:- ಡೋರ್ ನಂ.2809 ರ ಬೇಸ್‌ಮೆಂಟ್ ಹಾಕಿದ ನಿವೇಶನ **ದಕ್ಷಿಣಕ್ಕೆ**:- ಡೋರ್ ನಂ. 2811 ರ ವಾಸದ ಮನೆ. ಈ ಮಧ್ಯದ ಸ್ವತ್ತು ಒಂದು ಕ್ರಯಕ್ಕೆ ಒಳಪಟ್ಟಿರುತ್ತದೆ.

ಕ್ರಯಕ್ಕೆ ಪಡೆಯುವವರ ಸಹಿ
**ಮೊ: 91138 27940**

ಸಹಿ
**ಅಜಯ್ ಸಿ. (ಎ.ಸಿ) ವಕೀಲರು,**
ದಾವಣಗೆರೆ. **ಮೊ: 97430 19896**

## ಪುನೀತ್ 47ನೇ ಹುಟ್ಟುಹಬ್ಬಕ್ಕೆ 47 ಕೆ.ಜಿ. ಗಾತ್ರದ ಕೇಕ್



ಹೊನ್ನಾಳಿ

ಹೊನ್ನಾಳಿ, ಮಾ. 21- ಪುನೀತ್ ರಾಜ್‌ಕುಮಾರ್ ಅವರ 47ನೇ ಹುಟ್ಟುಹಬ್ಬದ ಅಂಗವಾಗಿ ಅಭಿಮಾನಿಗಳು, ಸಂಗೊಳ್ಳಿ ರಾಯಣ್ಣ ವೃತ್ತದ ಬಳಿ 47 ಕೆ.ಜಿ. ತೂಕದ ಬೃಹತ್ ಕೇಕನ್ನು ತಂದು ಮಾಜಿ ಶಾಸಕ ಡಿ.ಜಿ. ಶಾಂತನಗೌಡ ಅವರ ಮೂಲಕ ಕೇಕ್ ಕತ್ತರಿಸಿ ಸಂಭ್ರಮಿಸಿದರು.

ರಂಗಕರ್ಮಿ ಪ್ರೇಮ್‌ಕುಮಾರ್ ಬಂಡಿ ಗಡಿ ಕೇಕ್ ದಾನಿ ಬೂದಿ ರವಿ, ಉದ್ಯಮಿ ಎಚ್.ಬಿ.ಮೋಹನ್, ಗಾಳಿ ನಾಗರಾಜ್, ಪ್ರದೀಪ್ ಗೌಡ, ಯುವ ಕಾಂಗ್ರೆಸ್‌ನ ಪ್ರಶಾಂತ್ ಬಣ್ಣಜ್ಜಿ ಮತ್ತು ಇತರೆ ಮುಖಂಡರು ಭಾಗವಹಿಸಿ ಪುನೀತ್ ರಾಜ್‌ಕುಮಾರ್ ಅವರಿಗೆ ಗೌರವ ಸಮರ್ಪಿಸಿದರು. ಇದಕ್ಕೂ ಮೊದಲು ಸಂಗೊಳ್ಳಿ ರಾಯಣ್ಣ ಅವರ ಕಂಚಿನ ಪ್ರತಿಮೆಗೆ ಮಾಜಿ ಶಾಸಕ ಡಿ.ಜಿ.ಶಾಂತನಗೌಡ ಮಾಲಾರ್ಪಣೆ ಮಾಡಿದರು.

ಪುನೀತ್ ಅಭಿಮಾನಿ ಬಳಗದ ಪದಾಧಿಕಾರಿಗಳಾದ ಸ್ವರೂಪ್,ಮನೋಜ್, ಬಾಹುಬಲಿ ಸೇರಿದಂತೆ ಅನೇಕರು ಇದ್ದರು.

## ಮಲೇಬೆನ್ನೂರು : ಸಂಭ್ರಮದ ಹೋಳಿ



ಮಲೇಬೆನ್ನೂರು, ಮಾ.21- ಪಟ್ಟಣದಲ್ಲಿ ಶನಿವಾರ ಹೋಳಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಪಟ್ಟಣದ ಬಹುತೇಕ ಕಡೆಗಳಲ್ಲಿ ಯುವಕರು, ಮಕ್ಕಳು ಮತ್ತು ಯುವತಿಯರೂ ಸಹ ಪರಸ್ಪರ ಬಣ್ಣ ಹಚ್ಚಿ ಸಂಭ್ರಮಿಸಿದರು. ಮಧ್ಯಾಹ್ನ ಮುಖ್ಯ ವೃತ್ತದಲ್ಲಿ ಜಮಾಯಿಸಿದ ಪಟ್ಟಣದ ಎಲ್ಲಾ ಯುವಕರು ಜಿ.ಪಂ. ಮಾಜಿ ಸದಸ್ಯ ಬಿ.ಎಂ. ವಾಗೀಶ್‌ಸ್ವಾಮಿ ಅವರನ್ನು ಎತ್ತಿಕೊಂಡು ಡಿಜೆ ಸಂಗೀತಕ್ಕೆ ಕುಣಿದು ಕುಪ್ಪಳಿಸಿದರು. ನೀರಿನ ಟ್ಯಾಂಕರ್‌ಗೆ ಬಣ್ಣ ಬೆರೆಸಿದ್ದ ಯುವಕರು ಪೈಪ್ ಮೂಲಕ ಎಲ್ಲರಿಗೂ ಬಣ್ಣದ ಓಕಳಿ ಚೆಲ್ಲಿದರು. ನಂತರ ವಾಗೀಶ್‌ಸ್ವಾಮಿ ಅವರು ಮಡಿಕೆ ಒಡೆದು ಹೋಳಿಗೆ ತೆರೆ ಎಳೆದರು.

## ಜಗಳೂರು : ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿ ಬಿ.ಆರ್. ಚಂದ್ರಪ್ಪ



ಜಗಳೂರು, ಮಾ.21- ಸರ್ಕಾರಿ ನೌಕರರ ಸಂಘದ ನೂತನ ಅಧ್ಯಕ್ಷರಾಗಿ ದೊಣ್ಣೆಹಳ್ಳಿ ಪ್ರೌಢಶಾಲೆ ಹಿರಿಯ ಶಿಕ್ಷಕ ಬಿ.ಆರ್. ಚಂದ್ರಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಪಟ್ಟಣದ ಆರೋಗ್ಯ ಇಲಾಖೆ ಸಭಾಂಗಣದಲ್ಲಿ ಅಧಿಕೃತ ಆದೇಶ ಪ್ರತಿ ವಿತರಿಸಿ ಅಭಿನಂದಿಸಿದರು. ಇದೇ ಮಾರ್ಚ್ 15 ರಂದು ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಬಿ. ಆರ್.ಚಂದ್ರಪ್ಪ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವರನ್ನು ಅಧಿಕೃತವಾಗಿ ಘೋಷಣೆ ಮಾಡಿ ಪ್ರಮಾಣ ಪತ್ರ ವಿತರಿಸಿದರು.

ಸರ್ಕಾರಿ ನೌಕರರ ಸಂಘದ ಪತ್ತಿನ ಸಹಕಾರ ಬ್ಯಾಂಕ್ ಅಧ್ಯಕ್ಷ ಲಕ್ಷ್ಮಿಕಾಂತ್, ಮಾಜಿ ಕಾರ್ಯದರ್ಶಿ ಓ.ಟಿ.ತಿಪ್ಪೇಸ್ವಾಮಿ, ರಾಜ್ಯ ಪರಿಷತ್ ಸದಸ್ಯ ಸಿ.ಬಿ.ನಾಗರಾಜ್, ಮಾಜಿ ಅಧ್ಯಕ್ಷ ರವಿಕುಮಾರ, ವಾಮದೇವಪ್ಪ, ವೀರೇಶ್, ಬಸವರಾಜಪ್ಪ ಇತರರು ಹಾಜರಿದ್ದರು.

# ವಿಭಜನೆಗಿಂತ ಒಗ್ಗೂಡಿಸುವ ಬಸವ ತತ್ವ ಅಗತ್ಯ : ಮುರುಘಾ ಶರಣರು



**(1ನೇ ಪುಟದಿಂದ)** ತತ್ವಗಳನ್ನು ಅರ್ಥ ಮಾಡಿಕೊಂಡಿಲ್ಲ, ಬಸವ ತತ್ವ ಎಂದರೆ ಎಲ್ಲರನ್ನು ಒಳಗೊಳ್ಳುವ, ಒಗ್ಗೂಡಿಸುವ ಸಮಗ್ರ ತತ್ವವಾಗಿದೆ ಎಂದು ಮುರುಘಾ ಶರಣರು ಹೇಳಿದರು.

ವಿಭಜಿಸುವ, ಹೊಡೆದಾಡುವ ಇಂದಿನ ತತ್ವ ನಮಗೆ ಬೇಕಾಗಿಲ್ಲ, ಎಲ್ಲರನ್ನೂ ಒಟ್ಟಾಗಿ ಕರೆದುಕೊಂಡು ಹೋಗುವ ಸಮಾನತೆಯ, ಸಾಮರಸ್ಯದ, ವಿಶಾಲ ಹೃದಯದ, ಅಂತಃಕರಣದ ಬಸವಣ್ಣನ ತತ್ವ ಇಂದಿನ ಅಗತ್ಯವಾಗಿದೆ.

ಸಾಣೇಹಳ್ಳಿಯ ಶ್ರೀ ಡಾ.ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿ, ಬಸವಣ್ಣ, ಅಕ್ಕಮಹಾದೇವಿ ಸೇರಿದಂತೆ ಇನ್ನೂ ಅನೇಕ ದಾರ್ಶನಿಕರು ಈ ನಾಡಿಗೆ ಜ್ಞಾನದ ಬೆಳಕು ನೀಡಿದ್ದಾರೆ. ಎಲ್ಲಾ ದಾನಗಳಿಗಿಂತ ಶ್ರೇಷ್ಠ ದಾನ ಸಮಾಧಾನವಾಗಿದ್ದು, ಸಮಾಧಾನ ಇದ್ದಾಗ ಬದುಕಿನಲ್ಲಿ ಸಾಧನೆ ಮಾಡಲು ಸಾಧ್ಯ ಎಂಬುದಕ್ಕೆ ಬಸವಣ್ಣನವರು ಸಾಕ್ಷಿಯಾಗಿದ್ದಾರೆ. ಅವರಿಗೆ ಎಷ್ಟೇ ತೊಂದರೆ ನೀಡಿದರೂ, ಸಮಾನತೆಯ ಕಲ್ಯಾಣ ನಾಡು ಕಟ್ಟಬೇಕೆಂಬ ಉದ್ದೇಶವನ್ನು ಮಾತ್ರ ಅವರು ಕೊನೆಯವರೆಗೂ ಬಿಡಲಿಲ್ಲ. ಹಾಗಾಗಿಯೇ ಅವರನ್ನು ಎಲ್ಲಾ ಜಾತಿ, ಧರ್ಮಗಳ ಜನರು ಇಂದಿಗೂ ಪ್ರೀತಿಸುತ್ತಾರೆ. ಮುಖದಲ್ಲಿ ಸಿಟ್ಟು, ಹೊಟ್ಟೆಯಲ್ಲಿ ಕಿಚ್ಚು, ಮನಸ್ಸಿನಲ್ಲಿ ಕ್ರೋಧ ಇದ್ದರೆ ಬದುಕು ನರಕವಾಗುತ್ತದೆ ಎಂಬುದನ್ನು ನಾವು ಅರ್ಥ ಮಾಡಿಕೊಂಡು ಸಂಕುಚಿತ ಭಾವನೆ ಬಿಟ್ಟು, ನಿಸ್ವಾರ್ಥ ಕಾಯಕ, ಶ್ರದ್ಧೆ ಎಲ್ಲರನ್ನೂ ಪ್ರೀತಿಸುವ ಗುಣ ಬೆಳೆಸಿಕೊಳ್ಳಬೇಕು. ನಮ್ಮ ಬುದ್ಧಿ ಬೆಳೆದಿದೆ, ಆದರೆ ಹೃದಯ ಶೂನ್ಯವಾಗಿದೆ. ಬುದ್ಧಿ-ಹೃದಯದ ನಡುವೆ ಅವಿನಾಭಾವ ಸಂಬಂಧ ಬೆಳೆಸಿಕೊಂಡರೆ ಬದುಕು ಹಸಿರಾಗಿರುತ್ತದೆ.

ಮುಸ್ಲಿಮರು ಕೂಡಾ 12ನೇ ಶತಮಾನದಲ್ಲಿ ಕಲ್ಯಾಣದಲ್ಲಿದ್ದರು. ಬಸವಣ್ಣ ಅವರನ್ನು ಗೌರವಿಸುತ್ತಿದ್ದರು, ಮಲೇಬೆನ್ನೂರಿನಲ್ಲಿ ಹೆಚ್ಚಾಗಿರುವ ಮುಸ್ಲಿಂ ಬಾಂಧವರನ್ನು ನಿಮ್ಮ ಜೊತೆ ಸೇರಿಸಿಕೊಳ್ಳಿ, ಸಂಕಲ್ಪದಂತೆ ವರ್ಷದೊಳಗೆ ಬಸವ ಮಂಟಪ ನಿರ್ಮಾಣವಾಗಲಿ ಎಂದು ಸಾಣೇಹಳ್ಳಿ ಶ್ರೀಗಳು ಆಶಿಸಿದರು.

ಕೂಡಲಸಂಗಮದ ಬಸವ ಧರ್ಮ ಪೀಠಾಧ್ಯಕ್ಷರಾದ ಡಾ. ಗಂಗಾ ಮಾತಾಜಿ ಮಾತನಾಡಿ, ವಚನ ಸಾಹಿತ್ಯ ಎಲ್ಲರ ಬದುಕಿನ ಭಾಗವಾಗಿದ್ದು, ಪ್ರತಿಯೊಬ್ಬರೂ ಓದಿ ತಿಳಿದುಕೊಳ್ಳಬೇಕೆಂದರು.

ನರಸೀಪುರದ ಅಂಬಿಗರ ಚೌಡಯ್ಯನವರ ಗುರುಪೀಠದ ಶ್ರೀ ಶಾಂತ ಭೀಷ್ಮ ಚೌಡಯ್ಯ ಸ್ವಾಮೀಜಿ ಮಾತನಾಡಿ, ಬಸವಣ್ಣನವರು ಈ ನಾಡಿನಲ್ಲಿ ಹುಟ್ಟದಿದ್ದರೆ ನಾವಿನ್ನೂ ಮೂಢನಂಭಿಕೆ, ಶೋಷಣೆಯಲ್ಲೇ ಇರಬೇಕಾಗಿತ್ತು. ಅವರಿಂದಾಗಿ ಇಂದು ಸಣ್ಣ ಸಣ್ಣ ಸಮಾಜಗಳು ಬೆಳಕಿನಲ್ಲಿವೆ. ರಾಮ್‌ದೇವ್ ಬಾಬಾ ಅವರ ಯೋಗಕ್ಕಿಂತ ಇಷ್ಟಲಿಂಗ ಪೂಜೆಯಲ್ಲಿ ಅಗಾಧ ಶಕ್ತಿ ಇದೆ ಎಂದು ಸ್ವಾಮೀಜಿ ಹೇಳಿದರು.

ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠದ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಮಾತನಾಡಿ, ಬಸವ ಜಯಂತಿ ಆರಂಭಿಸಿದ ಮಹಾನ್ ಗಾಂಧಿವಾದಿ ಹರ್ಡೇಕರ್ ಮಂಜಪ್ಪ ಅವರು ಬಸವ ತತ್ವ ಪ್ರಚಾರ ಪಡಿಸಿದರು. ಅವರು ಸ್ವಲ್ಪ ಕಾಲ ಹರಿಹರದಲ್ಲಿದ್ದರೆಂಬುದು ಬಹಳ ಸಂತೋಷದ ವಿಷಯವಾಗಿದ್ದು, ಅನೇಕ ವಿಶೇಷತೆಗಳಿಂದ ನಾಡಿನ ಗಮನ ಸೆಳೆದಿರುವ ಹರಿಹರ ತಾಲ್ಲೂಕಿನಲ್ಲಿ ಬಸವ ಮಂಟಪ ನಿರ್ಮಾಣವಾಗುತ್ತಿರುವುದು ಇನ್ನೂ ವಿಶೇಷ ಎಂದರು.

ನಂದಿಗುಡಿ ಬೃಹನ್ಮಠದ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಬಸವಣ್ಣನವರು ತಮ್ಮ ಆಚಾರ-ವಿಚಾರಗಳಿಂದಾಗಿ ವಿಶ್ವ ಗುರುವಾದರು. ಅವರ ಅನುಯಾಯಿಗಳಾದ ಅನೇಕರು ಸಂಕುಚಿತ ಮನಸ್ಸುಗಳಿಂದಾಗಿ ಗೋಡೆ ಕಟ್ಟಿಕೊಂಡಿದ್ದಾರೆಂದು ಬೇಸರ ವ್ಯಕ್ತಪಡಿಸಿದರು.

ಚಿತ್ರದುರ್ಗದ ಕುಂಬಾರ ಗುರು ಪೀಠದ ಶ್ರೀ ಬಸವಮೂರ್ತಿ ಕುಂಬಾರ ಗುಂಡಯ್ಯ ಸ್ವಾಮೀಜಿ ಕೇತೇಶ್ವರ ಮಹಾಮಠದ ಶ್ರೀ ಇಮ್ಮಡಿ ಬಸವ ಮೇದಾರ ಕೇತೇಶ್ವರ ಸ್ವಾಮೀಜಿ ಆಶೀರ್ವಚನ ನೀಡಿ, ಬಸವಣ್ಣ ನಮ್ಮೆಲ್ಲರ ಬದುಕಿನ ದಾರಿದೀಪವಾಗಿದ್ದಾರೆ ಎಂದರು.

ಶಾಸಕ ಎಸ್.ರಾಮಪ್ಪ ಮಾತನಾಡಿ, ಬಸವ ಮಂಟಪ ನಿರ್ಮಾಣ ಒಳ್ಳೆಯ ಕೆಲಸವಾಗಿದ್ದು, ಕಟ್ಟಡಕ್ಕೆ 10 ಲಕ್ಷ ರೂ ಅನುದಾನ ನೀಡುವುದಾಗಿ ಭರವಸೆ ನೀಡಿಸರು.

ಮಾಜಿ ಶಾಸಕರುಗಳಾದ ಬಿ.ಪಿ. ಹರೀಶ್, ಹೆಚ್.ಎಸ್. ಶಿವಶಂಕರ್ ಮಾತನಾಡಿದರು. ದಾವಣಗೆರೆ ವಿರಕ್ತಮಠದ ಶ್ರೀ ಬಸವ ಪ್ರಭು, ದಾರವಾಡದ ನಾಗಲಾಂಬಿಕಾದೇವಿ ವೇದಿಕೆಯಲ್ಲಿದ್ದರು.

ಮಲೇಬೆನ್ನೂರಿನ ಶ್ರೀಮತಿ ಜ್ಯೋತಿ ಈರಮ್ಮ ಮಾತನಾಡಿದರು. ನಾಗರಾಜ್ ಸಾಣೇಹಳ್ಳಿ ಹಾಡಿದ ವಚನ ಗಾಯನ ಎಲ್ಲರ ಗಮನ ಸೆಳೆಯಿತು.

ಅಧ್ಯಕ್ಷತೆ ವಹಿಸಿದ್ದ ಬಸವ ಬಳಗ ಮತ್ತು ಅಕ್ಕನ ಬಳಗದ ಅಧ್ಯಕ್ಷ ವೈ.ನಾಗೇಶಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು.

ಪ್ರಗತಿಪರ ಚಿಂತಕ ಆವರಗೆರೆ ರುದ್ರಮುನಿ, ಹಿರಿಯ ವೈದ್ಯ ಡಾ. ಎಂ.ಜಿ. ರಂಗನಾಥ್, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ, ಎಪಿಎಂಸಿ ಮಾಜಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್, ಹರಿಹರ ತಾ.ಗ್ರಾ.ಜೆಡಿಎಸ್ ಅಧ್ಯಕ್ಷ ಹಳ್ಳಿಹಾಳ್ ಪರಮೇಶ್ವರಪ್ಪ, ತಾ.ಗ್ರಾ.ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟೆ ಲಿಂಗರಾಜ್, ನಂದಿ ಸೌಹಾರ್ದ ಸಹಕಾರಿ ಅಧ್ಯಕ್ಷ ಜಿಗಳಿ ಇಂದೂಧರ್, ಕೆ.ಪಿ. ಗಂಗಾಧರ್, ಪುರಸಭೆ ಸದಸ್ಯರಾದ ಬೆಣ್ಣೆಹಳ್ಳಿ ಸಿದ್ದೇಶ್, ಸಾಬೀರ್ ಆಲಿ, ಬಿ. ಮಂಜುನಾಥ್, ಗೌಡ್ರ ಮಂಜಣ್ಣ, ಎ.ಕೆ. ಲೋಕೇಶ್, ಗ್ರಾ.ಪಂ.ಮಾಜಿ ಸದಸ್ಯ ಕೆ. ಜಿ. ಮಂಜುನಾಥ್, ಓ.ಜಿ. ರುದ್ರಗೌಡ್ರು, ಕುಂಬಳೂರು ವಾಸು, ಆದಾಪುರ ವಿಜಯಕುಮಾರ್, ಪ್ರಭುಸ್ವಾಮಿ, ಅಡಿಕೆ ಬಸಣ್ಣ, ಬೆಣ್ಣೆಹಳ್ಳಿ ಬಸವರಾಜ್, ವಕೀಲ ಕೊಂಡಜ್ಜಿ ಶಿವಕುಮಾರ್, ಯಕ್ಕನಹಳ್ಳಿ ಬಸವರಾಜಪ್ಪ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಅಕ್ಕನ ಬಳಗದ ಸದಸ್ಯರು ಪ್ರಾರ್ಥಿಸಿದರು. ಶಿವ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷ ಡಾ. ಬಿ.ಚಂದ್ರಶೇಖರ್ ಸ್ವಾಗತಿಸಿದರು. ಹರಿಹರದ ನಳಿನಿ ನಿರೂಪಿಸಿದರೆ, ಚಿಟ್ಟಕ್ಕಿ ನಾಗರಾಜ್ ವಂದಿಸಿದರು.

ಕಾರ್ಯಕ್ರಮದ ವೇದಿಕೆಯಲ್ಲಿ ಬಸವಣ್ಣ ಮತ್ತು ಅಕ್ಕಮಹಾದೇವಿಯಾಗಿ ಅಂಗನವಾಡಿ ಎಲ್ ಕೇಂದ್ರದ ಪುಟಾಣಿಗಳಾದ ಅರ್ಮಾನ್ ಹಾಗೂ ತೇಜಸ್ವಿನಿ ವಚನ ಹೇಳಿ ಗಮನ ಸೆಳೆದರು.

> **“ ಬಸವ ಭಕ್ತರಾದರೆ ದೊಡ್ಡ ದೊಡ್ಡ ದೇವಸ್ಥಾನಗಳನ್ನು ಕಟ್ಟುತ್ತಾರೆ. ಮನೆಗಳಲ್ಲಿ ಹೋಮ, ಹವನ ಮಾಡಿಸುತ್ತಿರುವುದು ಬೇಸರದ ಸಂಗತಿ ಎಂದ ಸಾಣೇಹಳ್ಳಿ ಶ್ರೀಗಳು, ದೇವಸ್ಥಾನಗಳಿಗೆ ಕೊಡುವ ಹಣವನ್ನು ಜ್ಞಾನ, ಅರಿವು ಮೂಡಿಸುವ ಇಂತಹ ಕೇಂದ್ರಗಳಿಗೆ ನೀಡಿ.**
>
> **- ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಸಾಣೇಹಳ್ಳಿ**

## ಹಿಜಾಬ್ : ಗೈರಾದವರಿಗೆ ಪರೀಕ್ಷೆ ಇಲ್ಲ

**(1ನೇ ಪುಟದಿಂದ)** ಲಾಗದು ಎಂದು ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು ಹೇಳಿದ್ದಾರೆ.

ಪರೀಕ್ಷೆಗೆ ಗೈರಾಗಿದ್ದಾರೆ ಎಂಬುದು ಮುಖ್ಯವೇ ಹೊರತು ಯಾವ ಕಾರಣಕ್ಕೆ ಗೈರಾಗಿದ್ದಾರೆ ಎಂಬುದಲ್ಲ. ಅವರು ಹಿಜಾಬ್ ವಿವಾದಕ್ಕೆ ಗೈರಾಗಿರಬಹುದು, ಇಲ್ಲವೇ ಅನಾರೋಗ್ಯ, ಇಲ್ಲವೇ ಬರುವುದಿಕ್ಕೆ ಆಗಿಲ್ಲ, ಇಲ್ಲವೇ ಓದಿಲ್ಲ ಎಂಬ ಕಾರಣಕ್ಕೆ ಗೈರಾಗಿರಬಹುದು. ಅಂತಿಮವಾಗಿ ಗೈರಾಗಿದ್ದಾರೆ ಎಂಬುದೇ ಮುಖ್ಯವಾಗುತ್ತದೆ ಎಂದು ಸಚಿವರು ಹೇಳಿದ್ದಾರೆ.

ಪೂರಕ ಪರೀಕ್ಷೆಯಲ್ಲಿ ಅವಕಾಶಗಳಿವೆ. ಆದರೆ, ಹಿಜಾಬ್ ಕಾರಣಕ್ಕೆ ಹೊಸ ಪದ್ಧತಿಗೆ ಅವಕಾಶ ಕೊಡಲು ಆಗುವುದಿಲ್ಲ. ನಾಳೆ ಇನ್ನೂ ಹತ್ತು ಜನ ಬಂದು ನಮಗೆ ಬೇರೆ ಪರೀಕ್ಷೆ ಮಾಡಿ ಎನ್ನಬಹುದು. ಅದಕ್ಕೆಲ್ಲ ಅವಕಾಶವಿಲ್ಲ. ಒಬ್ಬೊಬ್ಬರಿಗೆ ಒಂದೊಂದು ಪ್ರಶ್ನೆ ಪತ್ರಿಕೆ ಇಲ್ಲ. ಎಲ್ಲರಿಗೂ ಒಂದೇ ಪ್ರಶ್ನೆ ಪತ್ರಿಕೆ ಎಂದವರು ತಿಳಿಸಿದ್ದಾರೆ.

ಹಿಜಾಬ್ ಕುರಿತು ಮಧ್ಯಂತರ ಆದೇಶ ಸಾಕಷ್ಟು ಮೊದಲೇ ಬಂದಿತ್ತು. ನಂತರದಲ್ಲಿ ಪರೀಕ್ಷೆಗಳಿಗೆ ಸಾಕಷ್ಟು ಮೊದಲೇ ಅಂತಿಮ ಆದೇಶ ಬಂದಿತ್ತು. ಸುಪ್ರೀಂ ಕೋರ್ಟ್‌ಗೆ ಹೋಗಿರುವ ಪಿ.ಯು. ವಿದ್ಯಾರ್ಥಿಗಳಿಗೆ ಮಧ್ಯಂತರ ಹಾಗೂ ಅಂತಿಮ ಆದೇಶ ಓದಲು ಬರುವುದಿಲ್ಲ ಎಂದು ನಾನೇನೂ ಅಂದುಕೊಳ್ಳಲ್ಲ. ಅವರಾಗೇ ನಿರ್ಧಾರ ತೆಗೆದುಕೊಂಡಿದ್ದಾರೆ. ಅವರಿಗೆ ನಾನು ಯಾವುದೇ ಉತ್ತರ ಕೊಡಲು ಆಗುವುದಿಲ್ಲ ಎಂದಿದ್ದಾರೆ.

## ನಗರದಲ್ಲಿ ಇಂದು ಓಶೋ ಧ್ಯಾನ ಶಿಬಿರ

ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಶನ್ ವತಿಯಿಂದ ಇಂದಿನಿಂದ ಇದೇ ದಿನಾಂಕ 27 ರವರೆಗೆ ಪ್ರತಿದಿನ ಬೆಳಿಗ್ಗೆ 6 ರಿಂದ 7.30 ರವರೆಗೆ ನಗರದ ಆಲೂರ್ ಕನ್ವೆನ್ಷನ್ ಹಾಲ್‌ನಲ್ಲಿ ಓಶೋ ಧ್ಯಾನ ಶಿಬಿರ ನಡೆಯಲಿದೆ ಎಂದು ಅರ್ಚನಾ (97385 72318), ಪುಷ್ಪ (90367 19573) ತಿಳಿಸಿದ್ದಾರೆ.

## ಶಿಕ್ಷಣ ವೆಚ್ಚ ಕಡಿಮೆಗೆ ಕ್ರಮ

**(1ನೇ ಪುಟದಿಂದ)** ನಾಗರಿಕರನ್ನು ಅಲ್ಲೇ ಬಿಟ್ಟಿದೆ ಎಂದು ಹೇಳಿದರು.

ಅಂತರರಾಷ್ಟ್ರೀಯ ಮಟ್ಟದಲ್ಲಿ ಮೋದಿ ಹೊಂದಿರುವ ವರ್ಚಸ್ಸು ಹಾಗೂ ಬೇರೆ ದೇಶಗಳ ಜೊತೆ ಹೊಂದಿರುವ ಉತ್ತಮ ಸಂಬಂಧಗಳ ಕಾರಣದಿಂದ ಉಕ್ರೇನ್ ಸುತ್ತಲಿನ ದೇಶಗಳ ರಾಯಭಾರಿ ಮಾರ್ಗಗಳ ಮೂಲಕ ವಿದ್ಯಾರ್ಥಿಗಳನ್ನು ವಾಪಸ್ ಕರೆ ತರಲು ಸಾಧ್ಯವಾಯಿತು. ಉಕ್ರೇನ್‌ನಲ್ಲಿ ಭಾರತೀಯ ವಿದ್ಯಾರ್ಥಿಗಳಿಗೆ ಅತಿ ಹೆಚ್ಚು ಪ್ರಾತಿನಿಧ್ಯ ಕೊಟ್ಟು, ಭಾರತದ ಧ್ವಜ ಹಿಡಿದು ಬಂದವರನ್ನು ಗಡಿ ದಾಟಿಸಲಾಗಿದೆ ಎಂದವರು ತಿಳಿಸಿದರು.

ಆಪರೇಷನ್ ಗಂಗಾ ಕಾರ್ಯಾಚರಣೆಗೆ ಮುಂಚೆ ಕರ್ನಾಟಕದ 61 ವಿದ್ಯಾರ್ಥಿಗಳು ಬಂದಿದ್ದರು. ಕಾರ್ಯಾಚರಣೆ ನಂತರ 572 ವಿದ್ಯಾರ್ಥಿಗಳು ವಾಪಸ್ ಬಂದಿದ್ದಾರೆ ಎಂದವರು ತಿಳಿಸಿದರು.

## ದೇವಾಲಯಕ್ಕೆ ಜಮೀನು ದಾನ

**(1ನೇ ಪುಟದಿಂದ)** ಮಹಾವೀರ್ ಮಂದಿರ್ ಟ್ರಸ್ಟ್‌ನ ಮುಖ್ಯಸ್ಥ ಆಚಾರ್ಯ ಕಿಶೋರ್ ಕುನಾಲ್ ಅವರು ಈ ವಿಷಯ ತಿಳಿಸಿದ್ದಾರೆ.

ಉದ್ಯಮಿ ಇಸ್ತಿಯಾರ್ ಅಹಮದ್ ಖಾನ್ ಅವರ ಕುಟುಂಬ ಜಮೀನು ದಾನ ಮಾಡಿದೆ. ಜಮೀನು ದಾನದ ಎಲ್ಲಾ ಪ್ರಕ್ರಿಯೆಗಳನ್ನು ಇತ್ತೀಚೆಗೆ ಪೂರ್ಣಗೊಳಿಸಲಾಗಿದೆ ಎಂದು ಕುನಾಲ್ ಹೇಳಿದ್ದಾರೆ.

ಎರಡು ಸಮುದಾಯಗಳ ನಡುವಿನ ಸೌಹಾರ್ದತೆ ಹಾಗೂ ಸಹೋದರತ್ವವನ್ನು ಈ ದಾನ ತೋರಿಸುತ್ತಿದೆ. ಮುಸ್ಲಿಮರ ನೆರವಿಲ್ಲದೇ ಈ ಕನಸಿನ ಯೋಜನೆ ಸಾಕಾರವಾಗುವುದು ಕಠಿಣವಾಗಿತ್ತು ಎಂದವರು ಹೇಳಿದ್ದಾರೆ. ಮಹಾವೀರ್ ಮಂದಿರ ಇದುವರೆಗೂ ಮಂದಿರ ನಿರ್ಮಾಣಕ್ಕಾಗಿ 125 ಎಕರೆ ಜಾಗ ಪಡೆದಿದೆ. ಈ ಪ್ರದೇಶದ ಇನ್ನೂ 25 ಎಕರೆ ಜಾಗ ಪಡೆಯುವ ಪ್ರಕ್ರಿಯೆ ನಡೆದಿದೆ.

## ಗಮನ ಸೆಳೆದ ವಿದ್ಯಾರ್ಥಿಗಳ ಮಾರುಕಟ್ಟೆ



ಕೊಕ್ಕನೂರು

ಮಲೇಬೆನ್ನೂರು, ಮಾ.21- ಕೊಕ್ಕನೂರು ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಗ್ರಾಹಕರ ಕ್ಲಬ್ ಅಡಿಯಲ್ಲಿ ಕಳೆದ ಒಂದು ವಾರದಿಂದ ಹಲವಾರು ಶೈಕ್ಷಣಿಕ ಕಾರ್ಯಕ್ರಮಗಳನ್ನು ಮಾಡುತ್ತಾ ಬರಲಾಗಿದೆ.

ಶನಿವಾರ ವಿದ್ಯಾರ್ಥಿಗಳಿಗೆ ವ್ಯವಹಾರ ಜ್ಞಾನ ಹೆಚ್ಚಿಸುವ ಉದ್ದೇಶದಿಂದ 'ನಮ್ಮೂರ ಸಂತೆ' ಎಂಬ ಹೆಸರಿನಲ್ಲಿ ದೈನಂದಿನ ಜೀವನಕ್ಕೆ ಬೇಕಾದ ಬಟ್ಟೆ, ಅಕ್ಕಿ, ಜೋಳ, ಗೋಧಿ, ತರಕಾರಿ, ಹಣ್ಣು, ಕಿರಾಣಿ ಸೇರಿದಂತೆ ಇನ್ನಿತರೆ ವಸ್ತುಗಳನ್ನು ವಿದ್ಯಾರ್ಥಿಗಳೇ ಮಾರಾಟ ಮಾಡುವ ಮಾರುಕಟ್ಟೆ ನಿರ್ಮಿಸಲಾಗಿತ್ತು.

ಪೋಷಕರು ಬಂದು ಮಕ್ಕಳ ಮಾರುಕಟ್ಟೆಯಲ್ಲಿ ಅಗತ್ಯ ವಸ್ತುಗಳನ್ನು ಖರೀದಿಸಿ, ಗಮನ ಸೆಳೆದರು. ಶಿಕ್ಷಕರಾದ ಶ್ವೇತಾ, ಮಾಧವ್ ಅವರೊಂದಿಗೆ ರಾಘವೇಂದ್ರ ಅವರೂ ಮಕ್ಕಳ ಮಾರುಕಟ್ಟೆಗೆ ಅಗತ್ಯ ಮಾರ್ಗದರ್ಶನ ನೀಡಿ, ಯಶಸ್ವಿಗೊಳಿಸಿದರೆಂದು ಗ್ರಾಮದ ಜಿ.ಎಸ್.ವಿಶ್ವ ತಿಳಿಸಿದರು.


**ಕೆಲಸಕ್ಕೆ ಬೇಕಾಗಿದ್ದಾರೆ**
ನಿರ್‌ವಿನ್ಸ್ ಕೆಫೆ ಯಲ್ಲಿ ಕೆಲಸ ಮಾಡಲು ಉತ್ಸಾಹಿ ಯುವಕ ಯುವತಿಯರು ಬೇಕಾಗಿದ್ದಾರೆ. ವಯಸ್ಸು - 18 To 30 ಬೇಕರಿಯಲ್ಲಿ ಕೆಲಸ ಮಾಡಿದವರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. Quali : ಪಿಯುಸಿ ಪಾಸ್ / ಫೇಲ್
93804 69079

**ನೆಲ ಮಳಿಗೆ ಬಾಡಿಗೆಗೆ ಇದೆ**
ಕೆ.ಟಿ.ಜೆ ನಗರದ 8ನೇ ಕ್ರಾಸ್‌ನಲ್ಲಿ 1600 ಚದರಡಿಯುಳ್ಳ ನೆಲ ಮಳಿಗೆಯು ಕಚೇರಿ ಅಥವಾ ಇನ್ನಿತರೆ ವಾಣಿಜ್ಯೋಪಯೋಗಕ್ಕೆ ಬಾಡಿಗೆಗಿದೆ.
ಸಂಪರ್ಕಿಸಿ: 94484-78786 98867-34802

**ಹಾಪ್‌ಕಾಮ್ಸ್ ಆನ್‌ಲೈನ್ ಮಾರಾಟ**
"HOPCOMS ONLINE" ನಲ್ಲಿ ಇಂದೇ ಖರೀದಿಸಿ ಬೆಳೆಗಾರರಿಂದ ಬಳಕೆದಾರರಿಗೆ ತಾಜಾ ಹಣ್ಣು ಮತ್ತು ತರಕಾರಿಗಳು ನಿಮ್ಮ ಮನೆ ಬಾಗಿಲಿಗೆ
Whats App Your Address
94821 66033

**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ 30x50 ಪಶ್ಚಿಮ, 40x70 ದಕ್ಷಿಣ ಬಾಲಾಜಿ ಬಡಾವಣೆಯಲ್ಲಿ 30x50 ಉತ್ತರ, ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ 20x30 ಪೂರ್ವ.
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಮನೆ ಬಾಡಿಗೆಗೆ ಇದೆ**
2BHK ಮೊದಲನೇ ಮಹಡಿ, ಬೋರ್‌ವೆಲ್ & ಕಾರ್ಪೊರೇಷನ್ ನೀರಿನ ವ್ಯವಸ್ಥೆಯಿರುವ ಮನೆ ದೇವರಾಜ ಅರಸ್ ಬಡಾವಣೆ 'ಬಿ' ಬ್ಲಾಕ್ 1ನೇ ಮುಖ್ಯರಸ್ತೆ, 11ನೇ ಕ್ರಾಸ್ ನಂ 353 'ಸಿರಿಸಾರ' ಉತ್ತರ ದಿಕ್ಕಿಗೆ ಬಾಗಿಲಿರುವ ಮನೆ ಬಾಡಿಗೆಗೆ ದೊರೆಯುತ್ತದೆ. ವಿಚಾರಿಸಿ
94489 63300

**ಬೇಕಾಗಿದೆ**
ತೆಂಗಿನಕಾಯಿ, ಎಳೆನೀರು, ಗಿಟುಗು ಬೇಕಾಗಿದೆ.
ತೆಂಗಿನಕಾಯಿ ತೋಟವಿರುವವರು ಸಂಪರ್ಕಿಸಿ :
98443 39631

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್‌ಮನ್, ಸೇಲ್ಸ್‌ಗರ್ಲ್ಸ್ ಬೇಕಾಗಿದ್ದಾರೆ.
ಸಂಪರ್ಕಿಸಿ : ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ.
87622 21696

**ಬೇಕಾಗಿದ್ದಾರೆ**
ಡಾಬಾಗೆ Full Time & Part Time ಸಪ್ಲೈಯರ್ ಬೇಕಾಗಿದ್ದಾರೆ. ಊಟ ಮತ್ತು ವಸತಿ ಸೌಲಭ್ಯ ಇರುತ್ತದೆ.
79756 25698 78999 66636

**WANTED**
Receptionist - Female
Sale Executive - Female
Allotment & Insurance - Male
- Written & Verbal Communication Skills
- Customer Service
- Multitasking & Problem-solving
- Familiarity With Microsoft Office
- Ability To Work Under Pressure
Age Limit : Below 40
Good Salary (ESI,PF + Incentive)
SRINIVASA HONDA
Ph No : 8884445242

**ಕಾರ್ ಡ್ರೈವರ್ ಬೇಕಾಗಿದ್ದಾರೆ**
ದ್ವಿಚಕ್ರ ವಾಹನ ಹಾಗೂ ಲೈಸನ್ಸ್ ಹೊಂದಿರುವ ಕಾರ್ ಡ್ರೈವರ್ ಬೇಕಾಗಿದ್ದಾರೆ. ಸಂಪರ್ಕಿಸಿ :
94486 56091
ಮೇಲ್ಕಂಡ ನಂಬರ್‌ಗೆ ಹಿಂದೆ ಕರೆ ಮಾಡಿದವರು ಪುನಃ ಕರೆ ಮಾಡಬೇಡಿ.

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250 91132 85992

**ಬೇಕಾಗಿದ್ದಾರೆ**
ಸಸ್ಯಹಾರಿ ಹೋಟೆಲ್‌ಗೆ ಭಟ್ಟರು ಬೇಕಾಗಿದ್ದಾರೆ. ಸಮಯ ಬೆಳಿಗ್ಗೆ 6 ರಿಂದ ಮಧ್ಯಾಹ್ನ 12ರವರೆಗೆ ಶಾಮನೂರು ರಸ್ತೆ, ದಾವಣಗೆರೆ.
ಮೊ. 97434-82356

**ಸಂಘ-ಸಂಸ್ಥೆ, ಟ್ರಸ್ಟ್ ಬೈಲಾ ನೋಂದಣಿ, ನವೀಕರಣ ಮತ್ತು ಆಡಿಟ್‌ಗಾಗಿ ಸಂಪರ್ಕಿಸಿ.**
Meghana Associates (R)
M : 99809 16126

**GST Registration, INCOME TAX Filing**
Audit and for Maintenances
Contact :
Meghana Associates (R)
M : 99809 16126

**ಹೆಬ್ಬೇವು ಮರಗಳು ಮಾರಾಟಕ್ಕಿವೆ**
ದಾವಣಗೆರೆ ತಾ. ಕ್ಯಾತನಹಳ್ಳಿ ಸಮೀಪ ಅಂದಾಜು 250 ಮರಗಳು ಮಾರಾಟಕ್ಕಿವೆ. ಸಂಪರ್ಕಿಸಿ :
99804 46808

**ಮತ್ಸ್ಯದ ಮನೆ**
ಮನೆಯಲ್ಲಿಯೇ ತಯಾರಿಸಿದ ಸಮುದ್ರದ ಮೀನು, ಚಿಕನ್, ಮಟನ್ ಆಹಾರಕ್ಕಾಗಿ ಸಂಪರ್ಕಿಸಿ
95133 14666
(ಹೋಂ ಡೆಲಿವರಿ ಮಾತ್ರ)

**ಬೇಕಾಗಿದ್ದಾರೆ.**
ಐ.ಟಿ.ಐ ಮೆಕ್ಯಾನಿಕಲ್ ಪಾಸ್ / ಫೇಲ್ ಆದ ನಗರದ ಸ್ಥಳೀಯ ಯುವಕರು ಬೇಕಾಗಿದ್ದಾರೆ.
ಮರುತ್ ಎಂಟರ್‌ಪ್ರೈಸಸ್.
ಬಾಪೂಜಿ ಬ್ಯಾಂಕ್ ಎದುರು. ಹದಡಿ ರಸ್ತೆ. ಸ್ಟೇಡಿಯಂ ಹತ್ತಿರ. ದಾವಣಗೆರೆ.
98868 96574

**ಬೆಂಗಳೂರಿನಲ್ಲಿ ಸೆಕ್ಯೂರಿಟಿ ಬೇಕಾಗಿದ್ದಾರೆ**
ಸಂಬಳ 9000, ಊಟ, ರೂಂ ಉಚಿತ
ಸಂಪರ್ಕಿಸಿ :
97400 98064, 97400 98047

**ಕ್ಲರ್ಕ್ ಬೇಕಾಗಿದ್ದಾರೆ**
ಕಂಪ್ಯೂಟರ್ ಅನುಭವವಿರುವ, ಬೇಸಿಕ್ ಟ್ಯಾಲಿ, ಕನ್ನಡ ಟೈಪಿಂಗ್, ಕನ್ನಡ ಮತ್ತು ಇಂಗ್ಲಿಷ್ ಓದಲು, ಬರೆಯಲು ಬಲ್ಲ ಯುವಕ - ಯುವತಿಯರು ಬೇಕಾಗಿದ್ದಾರೆ. ಗ್ಯಾಸ್ ಏಜೆನ್ಸಿಯಲ್ಲಿ ಅನುಭವಳ್ಳವರಿಗೆ ಆದ್ಯತೆ. ತತ್‌ಕ್ಷಣವೇ ಸಂಪರ್ಕಿಸಿ
ಶಂಕರಲೀಲಾ ಗ್ಯಾಸ್ ಏಜೆನ್ಸಿ
ಕುವೆಂಪು ನಗರ, ಎಂ.ಸಿ.ಸಿ. 'ಬಿ' ದಾವಣಗೆರೆ.

**ನವೋದಯ ಪರೀಕ್ಷೆ**
ನವೋದಯ ಪರೀಕ್ಷೆಗೆ ಒಂದು ತಿಂಗಳ ಕ್ರಾಶ್ ಕೋರ್ಸ್ (ವಸತಿ ಸಹಿತ ಮತ್ತು ವಸತಿ ರಹಿತ)
ಸಂಪರ್ಕಿಸಿ : 93803 89236, 97428 29076

**TO LET**
Office or Gowdown or Commercial Building for Rent
30 HP power speciality available
Ground Floor & II Floor 20 sqft
Opp. : Sub Register Office Behind Malabar Tyre, P.B. Road, Davangere.
98862 55308, 96111 14244

**ಮ್ಯಾಟ್ರಿಮೋನಿ**
ಯಾವುದೇ ಜಾತಿಯ ವಧು-ವರರ ಪ್ರೊಫೈಲ್‌ಗಳನ್ನು ನಮ್ಮ "DJSeva" App ನಲ್ಲಿ ಪೋಸ್ಟ್ ಮಾಡಿರಿ ಮತ್ತು ನಿಮ್ಮಿಷ್ಟದ ಪ್ರೊಫೈಲ್‌ಗಳಿಗೆ ನೇರವಾಗಿ ಸಂಪರ್ಕಿಸಿ. ಮಧ್ಯವರ್ತಿಗಳಿಲ್ಲ, ಬ್ರೋಕರೇಜ್ ಇಲ್ಲ. ಸಂಪರ್ಕಿಸಿ.
99028 47517, 70194 48109

**ಮನೆ ಮಾರಾಟಕ್ಕಿದೆ**
ಸಿದ್ಧವೀರಪ್ಪ ಬಡಾವಣೆ, 10ನೇ ಕ್ರಾಸ್. ನಂ. 1935/7, 44x60 ಅಳತೆಯಲ್ಲಿ 6 ಬೆಡ್ ರೂಂ ಡೂಪ್ಲೆಕ್ಸ್ ಮನೆ ಮಾರಾಟಕ್ಕಿದೆ.
99007 00091

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ಭಾರತದ ಹೆಸರಾಂತ ಅಪೆ ತ್ರಿ ಚಕ್ರ ಡೀಸೆಲ್ ಮತ್ತು ಪ್ಯಾಸೆಂಜರ್ ಹಾಗೂ ಕಾರ್ಗೋ ಸರಕು ಸಾಗಾಟ ವಾಹನಗಳನ್ನು ಮಾರಾಟ ಮಾಡಲು ತಾಲ್ಲೂಕುವಾರು
ಸೇಲ್ಸ್ ಎಕ್ಸಿಕ್ಯೂಟಿವ್ಸ್-4
ಕಂಪ್ಯೂಟರ್ ಆಪರೇಟರ್-2
ಬೇಕಾಗಿದ್ದಾರೆ.
ಅಭ್ಯರ್ಥಿಗಳು ಸ್ವಂತ ಬೈಕ್ ಹೊಂದಿರಬೇಕು.
ವಿದ್ಯಾರ್ಹತೆ :
SSLC to Degree.
ಆಕರ್ಷಕ ಸಂಬಳ + Incentive + TA, DA.
ಅಭ್ಯರ್ಥಿಗಳು ದಾಖಲಾತಿಯೊಂದಿಗೆ ನೇರವಾಗಿ ಸಂಪರ್ಕಿಸಿ.
ಸಮಯ : ಮ. 3 ರಿಂದ 5.
ಫೋನ್ /ಮೊಬೈಲ್ ವಿಚಾರಣೆ ಇರುವುದಿಲ್ಲ.
ಗಣೇಶ ಮೋಟಾರ್
ಎಲ್.ಐ.ಸಿ. ಆಫೀಸ್ ಎದುರು, ಪಿ.ಬಿ. ರಸ್ತೆ , ದಾವಣಗೆರೆ-6.

**ಬೇಕಾಗಿದ್ದಾರೆ**
ಸಿಲಿಂಡರ್ ಡಿಲೆವರಿ ಬಾಯ್ಸ್ ಬೇಕಾಗಿದ್ದಾರೆ. ಗೂಡ್ಸ್ ಗಾಡಿ (ಆಟೋ) ಲೈಸೆನ್ಸ್ ಹೊಂದಿರಬೇಕು. ಗ್ಯಾಸ್ ಏಜೆನ್ಸಿಯಲ್ಲಿ ಅನುಭವವುಳ್ಳವರಿಗೆ ಆದ್ಯತೆ. ತತ್‌ಕ್ಷಣವೇ ಸಂಪರ್ಕಿಸಿ
ಶಂಕರಲೀಲಾ ಗ್ಯಾಸ್ ಏಜೆನ್ಸಿ
ಕುವೆಂಪು ನಗರ, ಎಂ.ಸಿ.ಸಿ. 'ಬಿ' ದಾವಣಗೆರೆ.

**ನೇರ ಪರೀಕ್ಷೆಗಳು**
SSLC , PUC -ARTS/ COM/ SCI, BA, BCOM, MA, MCOM, MBA.
NTC: ನರ್ಸರಿ ಟೀಚರ್ ಟ್ರೈನಿಂಗ್.
ಗಂಗೋತ್ರಿ ಎಜುಕೇಶನಲ್ ಟ್ರಸ್ಟ್,
ಲಾಯರ್ ರೋಡ್, ದಾವಣಗೆರೆ. ಪಾಂಪ್ಲೆಟ್ಸ್ ಹಂಚಲು ಯುವಕ/ಯುವತಿಯರು ಬೇಕಾಗಿದ್ದಾರೆ.
ಮೊ:8660235013

**WANTED**
For field work daily 3 to 4 hours.
99160 41212

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್ & ಪವರ್ ಲಿಮಿಟೆಡ್
95135 03000

**ಮನೆ ಬಾಡಿಗೆಗಿವೆ**
ಶಾಮನೂರು ಪಕ್ಕ ಡಾಲರ್ಸ್ ಕಾಲೋನಿಯಲ್ಲಿ ಶಿವ ಸದನ ತಿಮ್ಮಾರೆಡ್ಡಿ ಹೈಸ್ಕೂಲ್ ಹತ್ತಿರ 1BHK, 2BHK ಮನೆ ಬಾಡಿಗೆಗೆ ಇವೆ. ಲಿಫ್ಟ್ ವ್ಯವಸ್ಥೆ ಇದೆ. ಸಂಪರ್ಕಿಸಿ
87623 12789 99722 44667

**WANTED**
Banking sector tele caller (Female Only)
Qualification - Any degree / PUC
No. 2257/5 2nd Floor, MCC `A' Block
Beside Togataveera Kalyana Mantapa
96630 72555
Interview time : 11 AM

**ಬೇಕಾಗಿದ್ದಾರೆ**
ಸ್ಕೂಲ್‌ವೇಟ್ ಕನ್ಸಲ್ಟೆನ್ಸಿ ಇದು ಒಂದು ಶೈಕ್ಷಣಿಕ ಸಂಸ್ಥೆಯಾಗಿದ್ದು, ಕರ್ನಾಟಕ ರಾಜ್ಯದ ಉತ್ತಮ ಶಾಲೆಗಳಿಗೆ, ಶಿಕ್ಷಕ, ಶಿಕ್ಷಕಿ, ಪ್ರಾಂಶುಪಾಲರು, ಶಾಲಾ ಸಂಯೋಜಕರು, ಕಂಪ್ಯೂಟರ್ ಶಿಕ್ಷಕಿ, ಅಡ್ಮಿನ್ಸ್‌ಗಳು, ನರ್ಸ್‌ಗಳು, ಉಸ್ತುವಾರಿ ಅಧಿಕಾರಿಗಳು, ಇನ್ನು ಮುಂತಾದ ಹುದ್ದೆಗಳಿಗೆ ಉತ್ತಮ ವೇತನದೊಂದಿಗೆ ನೇಮಕಾತಿ ಮಾಡಲಾಗುತ್ತದೆ. ಹೆಚ್ಚಿನ ವಿವರಗಳಿಗಾಗಿ.
80739 40062, 73536 39111

**WANTED / ಬೇಕಾಗಿದ್ದಾರೆ**
Male / Female graduate for Billing and Accounts Assistant Tally knowledge compulsory.
BAGRECHA TRADING Company
162, Narsaraja Road, Davanagere -577001 send resume by whatsapp
98440 78802
E-mail : kkb27041973@gmail.com

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ತಕ್ಷಣ ಬೇಕಾಗಿದ್ದಾರೆ**
DTDC ಕೋರಿಯರ್ ಆಫೀಸ್‌ನಲ್ಲಿ ಡೆಲಿವರಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ವಯಸ್ಸು : 20 ರಿಂದ 28 ವರ್ಷ
M : 97385 23711

**ಸಂಘ-ಸಂಸ್ಥೆ, NGO, ಟ್ರಸ್ಟ್‌ಗಳ GST & INCOME TAX ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.**
94838 62779

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ ಬಸವೇಶ್ವರ ಫಿಲ್ಲಿಂಗ್ ಸ್ಟೇಷನ್, ಭಾರತ್ ಪೆಟ್ರೋಲ್ ಲಿಮಿಟೆಡ್(BPCL), ವಾಣಿ ರೈಸ್ ಮಿಲ್ ಎದುರು, ಹದಡಿ ರೋಡ್, ದಾವಣಗೆರೆ.
94807 77338, 94821 09492

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್ , ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ದಾವಣಗೆರೆ
ಮೊ : 84769 49581

**SPACE AVAILABLE**
Built-to- Suit / Land for lease 1200 Sq.ft. located in Prime Area Suitable for Clinics, Hospitals & Offices.
Contact :
96636 50945, 98440 31115

**ಹೆಸರು ಬದಲಾವಣೆಗಾಗಿ**
ನಾಗರಾಜ್ M, ಆದ ನಾನು ನನ್ನ ಮಗನ ಹೆಸರು ಜನನ ಪತ್ರದಲ್ಲಿ ಲೋಹಿತ್ ಕುಮಾರ್ ಎಂದು ಇದ್ದು ಇನ್ನು ಮುಂದೆ ಮಗನ ಹೆಸರನ್ನು ಜ್ಞಾನೇಶ್ ಕುಮಾರ್ ದೊಡ್ಡಮನಿ ಟಿ.ಎನ್. ಎಂದು ಇರುತ್ತದೆ.
ನಾಗರಾಜ್ .ಎಂ.

**ಹೆಸರು ಬದಲಾವಣೆಗಾಗಿ**
ಅನ್ವರ್ ಅಹ್ಮದ್ ಆದ ನಾನು ನನ್ನ ಮಗನ ಜನನ ಪತ್ರದಲ್ಲಿ ನೂರ್ ಅಹ್ಮದ್ ಎಂದು ಇದ್ದು ಇನ್ನೂ ಮುಂದೆ ನನ್ನ ಮಗನ ಹೆಸರು ಜಬೀವುಲ್ಲಾ ಎಂದು ಇರುತ್ತದೆ.
ಅನ್ವರ್ ಅಹ್ಮದ್

**ಹೆಸರು ಬದಲಾವಣೆಗಾಗಿ**
ಮಂಜುನಾಥ ರುದ್ರಳ್ಳಿ ಆದ ನಾನು ನನ್ನ ಮಗಳ ಜನನ ಪತ್ರದಲ್ಲಿ ಮಗಳ ಹೆಸರು ಆಗಮ್ಯ ಯಾನೆ ಆದ್ಯಾ , ತಂದೆಯ ಹೆಸರು ಮಂಜಪ್ಪ ಪರಮೇಶಪ್ಪ ರುದ್ರಳ್ಳಿ ಎಂದು ತಪ್ಪಾಗಿರುತ್ತದೆ. ಇನ್ನು ಮುಂದೆ ಮಗಳ ಹೆಸರು ಆದ್ಯಾ ಎಂ.ಆರ್. ಹಾಗೂ ತಂದೆಯ ಹೆಸರು ಮಂಜಪ್ಪ ರುದ್ರಳ್ಳಿ ಎಂದು ಇರುತ್ತದೆ.
ಮಂಜಪ್ಪ ರುದ್ರಳ್ಳಿ

**ಹೆಸರು ಬದಲಾವಣೆಗಾಗಿ**
ಹೀನಾಬಾನು ಆದ ನಾನು ನನ್ನ ಮಗಳ ಜನನ ಪತ್ರದಲ್ಲಿ ನನ್ನ ಹೆಸರು, ಹೀನಾ ನಾಜೀಮ್ ಎಂದು ಇದ್ದು ಇನ್ನೂ ಮುಂದೆ ನನ್ನ ಹೆಸರು ಹೀನಾಬಾನು.ಬಿ. ಎಂದು ಇರುತ್ತದೆ.
ಹೀನಾಬಾನು.ಬಿ.

**ಹೆಸರು ಬದಲಾವಣೆಗಾಗಿ**
ನಾಗರಾಜ್ M, ಆದ ನಾನು ನನ್ನ ಮಗನ ಹೆಸರು ಜನನ ಪತ್ರದಲ್ಲಿ ದರ್ಶನ್ ದೊಡ್ಡಮನಿ ಟಿ.ಎನ್. ಎಂದು ಇದ್ದು, ಇನ್ನು ಮುಂದೆ ಮಗನ ಹೆಸರು ಅಭಿಷೇಕ್ ಕುಮಾರ್ ದೊಡ್ಡಮನಿ ಟಿ. ಎನ್. ಎಂದು ಇರುತ್ತದೆ.
ನಾಗರಾಜ್ .ಎಂ

**ಹೆಸರು ಬದಲಾವಣೆಗಾಗಿ**
ಜನನ ಪತ್ರದ ದಾಖಲೆಯಲ್ಲಿ ತಂದೆಯ ಹೆಸರು ಬಿ.ಕರಿಬಸಪ್ಪ ಹಾಗೂ ತಾಯಿಯ ಹೆಸರು ಜ್ಯೋತಿ ಬಿ.ಎಂ. ಎಂದು ಇದ್ದು ನನ್ನ ಹೆಸರು ಬೇಲೂರು ಕರಿಬಸಪ್ಪ ಹಾಗೂ ಬೇಲೂರು ಜ್ಯೋತಿ ಎಂದು ಇನ್ನೂ ಮುಂದೆ ಚಾಲ್ತಿಯಲ್ಲಿರುತ್ತದೆ. ಎಂದು ಈ ಮೂಲಕ ತಿಳಿಸುತ್ತೇವೆ.
ಬೇಲೂರು ಕರಿಬಸಪ್ಪ

**ಮಾಂತ್ರಿಕ ಮೋಡಿ ಬೆಟ್ಟಪ್ಪ ನಂ.1 ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

# ಪಂಚಾಯ್ತಿ ಮಟ್ಟದಲ್ಲಿ ಗ್ರಾಮ ಒನ್‌ಗೆ ಮಂಜೂರಾತಿ

ಬೆಂಗಳೂರು, ಮಾ. 21 - ಗ್ರಾಮ ಪಂಚಾಯ್ತಿ ಮಟ್ಟದಲ್ಲೂ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಗ್ರಾಮ ಒನ್ ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರ ಆಡಳಿತಾತ್ಮಕ ಮಂಜೂರಾತಿ ನೀಡಿದೆ ಎಂದು ಕಂದಾಯ ಸಚಿವ ಆರ್.ಅಶೋಕ್ ವಿಧಾನಸಭೆಗೆ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಬಸನಗೌಡ ತುರುವಿಹಾಳ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಗ್ರಾಮ ಪಂಚಾಯ್ತಿ ಮಟ್ಟದಲ್ಲೂ ಪಿಪಿಪಿ ಸಹಭಾಗಿತ್ವದಲ್ಲಿ ಗ್ರಾಮ ಒನ್ ಕೇಂದ್ರಗಳು ಪ್ರಾರಂಭವಾದರೆ, ಸೇವಾ ಸಿಂಧು ಅಡಿ ಲಭ್ಯವಿರುವ ಸೇವೆಗಳೂ ಸೇರಿದಂತೆ ಸರ್ಕಾರವು ಕಾಲ ಕಾಲಕ್ಕೆ ನಿರ್ಧರಿಸುವ ಸೇವೆ ಒದಗಿಸಲು ಅನುಕೂಲವಾಗಲಿದೆ ಎಂದು ಹೇಳಿದರು.

ನಾಡ ಕಚೇರಿಯನ್ನು ಜನರಿಗೆ ಅನುಕೂಲವಾಗಲು ಹೋಬಳಿ ಮಟ್ಟದಲ್ಲಿ ನಿರ್ಮಿಸಿದ್ದೇವೆ. ಇವುಗಳನ್ನು ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ ಎಂದು ಸ್ಪಷ್ಟಪಡಿಸಿದರು.

ಶೀಘ್ರದಲ್ಲೇ ಹೊಸದಾಗಿ ಮೂರು ಸಾವಿರ ಭೂಮಾಪಕರನ್ನು ನೇಮಕ ಮಾಡಿಕೊಳ್ಳಲು ತೀರ್ಮಾನಿಸಲಾಗಿದೆ ಎಂದು ಡಾ. ಯತೀಂದ್ರ ಅವರ ಮತ್ತೊಂದು ಪ್ರಸ್ತಾವಕ್ಕೆ ತಿಳಿಸಿದರು.

ಖಾಲಿ ಇರುವ ಭೂಮಾಪಕರನ್ನು ನೇಮಕ ಮಾಡಲು ಮೂರು ಸಾವಿರ ಭೂಮಾಪಕರ ಹುದ್ದೆ ನೇಮಕಾತಿ ಪ್ರಕ್ರಿಯೆ ಆರಂಭವಾಗಿದೆ.

ಇದರಿಂದ ಹಲವು ವರ್ಷಗಳಿಂದ ಬಾಕಿ ಉಳಿದಿರುವ ಜಮೀನುಗಳ ಸರ್ವೇ ಕಾರ್ಯವನ್ನು ತ್ವರಿತವಾಗಿ ನಡೆಸಲು ಅನುಕೂಲವಾಗಲಿದೆ ಎಂದರು.

ಪ್ರಸ್ತುತ 4020 ಭೂಮಾಪಕರಿದ್ದು, ಈ ಪೈಕಿ 3379 ಭೂಮಾಪಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ರಾಜ್ಯ ಸರ್ಕಾರ ಇತ್ತೀಚೆಗೆ 2685 ಭೂಮಾಪಕರನ್ನು ಲೈಸೆನ್ಸ್ ಪಡೆದವರನ್ನು ನೇಮಿಸಿಕೊಂಡು ಸರ್ವೇ ಕಾರ್ಯಕ್ಕೆ ನಿಯೋಜಿಸಿದೆ ಎಂದು ಹೇಳಿದರು.

ಪ್ರತಿ ತಾಲ್ಲೂಕಿನಲ್ಲೂ ಭೂಮಾಪಕರ ಕೊರತೆ ಯಿಂದ ಸುಮಾರು ಎರಡು ಲಕ್ಷಕ್ಕೂ ಹೆಚ್ಚು ಪ್ರಕರಣಗಳು ಬಾಕಿ ಇದ್ದು, ಇನ್ನೂ ಆರು ತಿಂಗಳಲ್ಲಿ ಸರ್ವೇ ಪ್ರಕ್ರಿಯೆ ಮುಗಿಸಲು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದೇವೆ ಎಂದರು.

## ಗುಲಾಂ ನಬಿ ಆಜಾದ್ ಸೇರಿದಂತೆ 54 ಸಾಧಕರಿಗೆ ಪದ್ಮ ಪ್ರಶಸ್ತಿ ಪ್ರದಾನ

ನವದೆಹಲಿ, ಮಾ. 21 – ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ದೇಶದ 54 ಗಣ್ಯ ಸಾಧಕರಿಗೆ ಪದ್ಮ ಪ್ರಶಸ್ತಿಗಳನ್ನು ಪ್ರದಾನ ಮಾಡಿದ್ದಾರೆ.

ರಕ್ಷಣಾ ಪಡೆಗಳ ಮುಖ್ಯಸ್ಥ ಬಿಪಿನ್ ರಾವತ್ ಹಾಗೂ ಗೀತಾ ಪ್ರೆಸ್ ಪ್ರಕಾಶಕ ರಾಧೇಶ್ಯಾಮ್ ಖೆಮ್ಕ ಅವರಿಗೆ ಮರಣೋತ್ತರವಾಗಿ ಪದ್ಮ ವಿಭೂಷಣ ಪ್ರಶಸ್ತಿ ನೀಡಲಾಗಿದೆ. ಕಾಂಗ್ರೆಸ್ ನಾಯಕ ಗುಲಾಂ ನಬಿ ಆಜಾದ್, ಟಾಟಾ ಸನ್ಸ್ ಅಧ್ಯಕ್ಷ ಎನ್.ಚಂದ್ರಶೇಖರನ್, ಮಾಜಿ ಸಿ.ಎ.ಜಿ.ರಾಜೀವ್ ಮಹರ್ಷಿ, ಸೆರಂ ಸ್ಥಾಪಕ ಸೈರಸ್ ಪೂನಾವಾಲಾ ಅವರು ಪದ್ಮಭೂಷಣ ಪ್ರಶಸ್ತಿ ಪಡೆದುಕೊಂಡಿದ್ದಾರೆ.

ಈ ವರ್ಷ ಭಾರತ ರತ್ನ ಪ್ರಶಸ್ತಿಯನ್ನು ಯಾರಿಗೂ ಪ್ರಕಟಿಸಿಲ್ಲ. ಕಲೆ, ಸಾಮಾಜಿಕ ಕಾರ್ಯ, ಸಾರ್ವಜನಿಕ ಸೇವೆ, ವಿಜ್ಞಾನ, ವ್ಯಾಪಾರ, ಉದ್ಯಮ, ಔಷಧಿ, ಸಾಹಿತ್ಯ ಹಾಗೂ ಶಿಕ್ಷಣ ಸೇರಿದಂತೆ, ಹಲವು ವಲಯಗಳಲ್ಲಿ ಸಾಧನೆ ಮಾಡಿದ ಗಣ್ಯರಿಗೆ ಪ್ರಶಸ್ತಿ ಪ್ರದಾನ ಮಾಡಲಾಗಿದೆ.

## ಹತ್ತಕ್ಕಿಂತ ಹೆಚ್ಚು ನೌಕರರಿದ್ದರೆ ಲೈಂಗಿಕ ಪೀಡನೆ ದೂರು ಸಮಿತಿ ಕಡ್ಡಾಯ

ನವದೆಹಲಿ, ಮಾ. 21 – ಸರ್ಕಾರಿ ಅಥವಾ ಖಾಸಗಿ ಯಾವುದೇ ವಲಯದಲ್ಲಿ ಹತ್ತಕ್ಕಿಂತ ಹೆಚ್ಚು ನೌಕರರನ್ನು ಹೊಂದಿದ್ದರೆ ಲೈಂಗಿಕ ಪೀಡನೆ ದೂರುಗಳ ತನಿಖೆಗೆ ಆಂತರಿಕ ಸಮಿತಿ ರಚಿಸುವುದು ಕಡ್ಡಾಯ ಎಂದು ಲೋಕಸಭೆಗೆ ತಿಳಿಸಲಾಗಿದೆ.

ಲೋಕಸಭೆಯಲ್ಲಿ ಹೇಳಿಕೆ ನೀಡಿರುವ ಕೇಂದ್ರ ಕಾರ್ಮಿಕ ಖಾತೆ ಸಚಿವ ಭೂಪೇಂದರ್ ಯಾದವ್, ಮಹಿಳೆಯರಿಗೆ ಕೆಲಸದ ಸ್ಥಳಗಳಲ್ಲಿ ಸುರಕ್ಷಿತ ವಾತಾವರಣ ಕಲ್ಪಿಸಲು 2013ರಲ್ಲಿ ಮಹಿಳೆಯರಿಗೆ ಕೆಲಸದ ಸ್ಥಳದಲ್ಲಿ ಲೈಂಗಿಕ ಪೀಡನೆಯಿಂದ ರಕ್ಷಣೆ ನೀಡುವ ಕಾಯ್ದೆ ಜಾರಿಗೆ ತರಲಾಗಿತ್ತು ಎಂದಿದ್ದಾರೆ. ಈ ಕಾಯ್ದೆಯ ಅನ್ವಯ ಹತ್ತಕ್ಕಿಂತ ಹೆಚ್ಚು ಉದ್ಯೋಗಿಗಳು ಇರುವ ಸಂಸ್ಥೆಗಳಲ್ಲಿ ಲೈಂಗಿಕ ಪೀಡನೆ ಸಮಿತಿ ರಚಿಸುವುದು ಕಡ್ಡಾಯ ಎಂದವರು ಹೇಳಿದ್ದಾರೆ. ಇದೇ ರೀತಿ, ರಾಜ್ಯ ಸರ್ಕಾರಗಳು ಪ್ರತಿ ಜಿಲ್ಲಾ ಮಟ್ಟದಲ್ಲಿ ಸ್ಥಳೀಯ ಸಮಿತಿಗಳನ್ನು ರಚಿಸಿ, ಕೆಲಸದ ಸ್ಥಳಗಳಿಂದ ಬರುವ ದೂರುಗಳ ಪರಿಶೀಲನೆಗೆ ತಿಳಿಸಬಹುದು ಎಂದು ಯಾದವ್ ಹೇಳಿದ್ದಾರೆ.

# ಸ್ವಾಸ್ಥ್ಯ ಸಮಾಜಕ್ಕಾಗಿ ಕ್ರೀಡಾಕೂಟ ಸಹಕಾರಿ

## ಸರ್ಕಾರಿ ನೌಕರರ ಜಿಲ್ಲಾ ಕ್ರೀಡಾಕೂಟವನ್ನು ಉದ್ಘಾಟಿಸಿದ ಬಿ.ಪಾಲಾಕ್ಷಿ



ದಾವಣಗೆರೆ, ಮಾ.21- ರಾಜ್ಯ ಸರ್ಕಾರಿ ನೌಕರರ ಜಿಲ್ಲಾ ಮಟ್ಟದ ಕ್ರೀಡಾಕೂಟಕ್ಕೆ ಜಿಲ್ಲಾ ಕ್ರೀಡಾಂಗಣದಲ್ಲಿ ಇಂದು ಚಾಲನೆ ನೀಡಲಾಯಿತು.

ಬಲೂನು ಹಾರಿ ಬಿಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಾಲಾಕ್ಷಿ, ದೈಹಿಕ ಹಾಗೂ ಮಾನಸಿಕ ಸ್ವಾಸ್ಥ್ಯಕ್ಕಾಗಿ ಕ್ರೀಡೆಗಳು ಸಾಂಸ್ಕೃತಿಕ ಕಾರ್ಯಕ್ರಮಗಳು ಸಹಕಾರಿ ಎಂದರು.

ನೌಕರರು ದೈಹಿಕವಾಗಿ ಮಾನಸಿಕವಾಗಿ ಸದೃಢರಾದರೆ ಸಮಾಜದಲ್ಲಿ ಸ್ವಾಸ್ಥ್ಯ ಕಾಣಲು ಸಾಧ್ಯ. ಸ್ಪರ್ಧಾಳುಗಳು ತೀರ್ಪುಗಾರರ ತೀರ್ಪನ್ನು ಗೌರವಿಸಬೇಕು ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ ಅವರು ಗುಂಡು ಎಸೆಯುವ ಮೂಲಕ ಕ್ರೀಡಾಕೂಟಕ್ಕೆ ಚಾಲನೆ ನೀಡಿ, ಆರೋಗ್ಯವೇ ಭಾಗ್ಯ ಎಂಬ ನುಡಿಗಟ್ಟಿನಂತೆ, ಕ್ರೀಡೆಯಲ್ಲಿ ಭಾಗವಹಿಸಿ, ಉತ್ತಮ ಆರೋಗ್ಯ ಕಾಪಾಡಿಕೊಳ್ಳುವಂತೆ ಸಲಹೆ ನೀಡಿದರು.

ಕ್ರೀಡಾಕೂಟದ ಧ್ವಜಾರೋಹಣ ನೆರವೇರಿಸಿದ ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕಿ ಸುಚೇತನ ನೆಲವಿಗಿ ಮಾತನಾಡುತ್ತಾ, ಬೇಸಿಕೆಯ ಬಿಸಿಲಿನಲ್ಲೂ ಉತ್ಸಾಹದಿಂದ ಕ್ರೀಡೆಯಲ್ಲಿ ಪಾಲ್ಗೊಳ್ಳಲು ಬಂದಿರುವುದು ಅಭಿನಂದನಾರ್ಹ ಎಂದರು.

ಇದೇ ವೇಳೆ ರಾಷ್ಟ್ರಮಟ್ಟದ ಕುಸ್ತಿ ಸ್ಪರ್ಧೆಗಳಲ್ಲಿ ಯಶಸ್ಸು ಗಳಿಸಿದ ಭಾವನ ಹಾಗೂ ಲಕ್ಷ್ಮಿ ಅವರುಗಳನ್ನು ಸನ್ಮಾನಿಸಿ, ಗೌರವಿಸಲಾಯಿತು.

ಮಂಡ್ಯ ಜಿಲ್ಲೆಯ ಕಲಾವಿದರು ಪೂಜಾ ಕುಣಿತ ನಡೆಸಿಕೊಟ್ಟರು.

680 ಪುರುಷರು, 280 ಮಹಿಳೆಯರು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು. ಸಂಘದ ಕಾರ್ಯದರ್ಶಿ ಸಿ.ಗುರುಮೂರ್ತಿ, ಖಜಾಂಚಿ ಕಲ್ಲೇಶಪ್ಪ ಎಸ್., ರಾಜ್ಯ ಪರಿಷತ್ ಸದಸ್ಯ ಎಸ್. ರಂಗನಾಥ್, ತಾಲ್ಲೂಕು ಅಧ್ಯಕ್ಷರುಗಳಾದ ಬಿ. ಆರ್. ಚಂದ್ರಪ್ಪ, ರೇವಣಸಿದ್ದಪ್ಪ ಅಂಗಡಿ, ಬಿ. ಕುಮಾರ್, ವಿಜಯಕುಮಾರ್ ಜಿ.ಬಿ., ಎಂ.ಕೆ. ಶಶಿಧರ್, ವಿಶಾಲ್, ಡಾ. ಉಮೇಶ್, ಎ.ಪಿ. ಠಾಕೂರ್ ಇತರರು ಉಪಸ್ಥಿತರಿದ್ದರು. ಉಪಾಧ್ಯಕ್ಷ ಬಿ.ಆರ್. ತಿಪ್ಪೇಸ್ವಾಮಿ ಕಾರ್ಯಕ್ರಮ ನಿರೂಪಿಸಿದರು. ಡಿ.ಎನ್. ಗಣೇಶ್ ಸ್ವಾಗತಿಸಿದರು.

# 'ಕಾಶ್ಮೀರಿ ಫೈಲ್' ಹಿಂದೂಗಳಿಗೆ ಎಚ್ಚರಿಕೆ ಗಂಟೆ : ಆವರಗೊಳ್ಳ ಶ್ರೀ

ದಾವಣಗೆರೆ, ಮಾ. 21- ಭಾರತ ದೇಶದ ಭೂ ಸ್ವರ್ಗವೆಂದೇ ಹೇಳುವ, ಅಳಿವಿನಂಚಿನಲ್ಲಿರುವ ಕಾಶ್ಮೀರವನ್ನು ಉಳಿಸಿ, ಬೆಳೆಸುವ ಪ್ರಾಮಾಣಿಕ ಸಾರ 'ಕಾಶ್ಮೀರಿ ಫೈಲ್' ಚಿತ್ರದಲ್ಲಿದೆ. ಚಿತ್ರದ ಸಂದೇಶ ಎಚ್ಚರಿಕೆ ಗಂಟೆಯಾಗಿ ಪರಿಣಮಿಸಲಿದೆ ಎಂದು ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ನಗರದ ತ್ರಿಶೂಲ್ ಚಿತ್ರಮಂದಿರದಲ್ಲಿ 'ಕಾಶ್ಮೀರಿ ಫೈಲ್ಸ್' ಚಿತ್ರದ ಮಧ್ಯಾಹ್ನದ ಪ್ರದರ್ಶನ ವೀಕ್ಷಿಸಿದ ನಂತರ ಸುದ್ದಿಗಾರರೊಂದಿಗೆ ಶ್ರೀಗಳು ಮಾತನಾಡಿದರು.

32 ವರ್ಷಗಳ ಹಿಂದೆ ಭಾರತದ ಮುಕುಟ ಕಾಶ್ಮೀರದಲ್ಲಿ ಕಾಶ್ಮೀರಿ ಪಂಡಿತರ ಹತ್ಯೆ ಮತ್ತು ವಲಸೆ ಕುರಿತ ಘಟನೆಗಳನ್ನಾಧರಿಸಿ ತಯಾರಿಸಿದ ಚಿತ್ರ ಇದಾಗಿದ್ದು, 1990 ರಲ್ಲಿ ಕಾಶ್ಮೀರದ ಭಯೋತ್ಪಾದಕರ ಹಿಂಸೆಗೆ ನಲುಗಿ ಪ್ರಾಣ ಕಳೆದುಕೊಂಡ ಒಂದು ಕುಟುಂಬದ ಕಥೆಯನ್ನು ಜನರ ಮುಂದೆ ಇಡಲಾಗಿದೆ ಎಂದರು.

ಕಲ್ಲು ಹೃದಯವನ್ನು ನಡುಗಿಸುವಂತಹ ದೃಶ್ಯಗಳು ಈ ಚಿತ್ರದಲ್ಲಿವೆ. ಜಾತ್ಯತೀತ



ಮನೋಭಾವನೆಯಿಂದ ಹಿಂದೂಗಳೆಲ್ಲಾ ಒಂದಾಗಿ ಕಾಶ್ಮೀರ ಉಳಿವಿಗಾಗಿ ಹೋರಾಟ ನಡೆಸುವ ಅಗತ್ಯವಿದೆ ಎಂದರು.

ಕಾಶ್ಮೀರದ ಗತವೈಭವವನ್ನು ಪುನರ್ ಪ್ರತಿಷ್ಠಾಪಿಸಲು ಪ್ರಧಾನಿ ನರೇಂದ್ರ ಮೋದಿಯವರು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ. ಭವಿಷ್ಯತ್ತಿನ ಯುವ ಪೀಳಿಗೆಗೆ ಕಾಶ್ಮೀರದ ಪ್ರಾಮುಖ್ಯತೆಯನ್ನು ಮನವರಿಕೆ ಮಾಡಿಕೊಡಬೇಕಾಗಿದೆ ಎಂದು ತಿಳಿಸಿದರು.

ಹೆಬ್ಬಾಳು ವಿರಕ್ತಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ಮಾತನಾಡಿ, ಭಾರತಕ್ಕೆ ಆದ ಅನ್ಯಾಯ, ಕಾಶ್ಮೀರಿ ಪಂಡಿತರು ಅನುಭವಿಸಿದ ಹಿಂಸೆ, ಯಾತನೆ ಬಗ್ಗೆ ಕಾಶ್ಮೀರಿ ಫೈಲ್ಸ್ ಚಿತ್ರದಲ್ಲಿ ಚಿತ್ರಿಸಲಾಗಿದೆ. ಬಲಿದಾನಕ್ಕೆ ಮತ್ತೆ ಕಾಶ್ಮೀರಿ ಪಂಡಿತರು ಹೋಗಿ ನೆಲೆಸುವ ಕಾಲ ಬಂದೊದಗಿದೆ ಎಂದರು.

ಉತ್ತಮ ಆದರ್ಶಗಳನ್ನು ಪಾಲಿಸುವ ಮೂಲಕ ಕಾಶ್ಮೀರ ಉಳಿಸಿ, ಬೆಳೆಸುವಲ್ಲಿ ಹಿಂದೂಗಳು ಒಟ್ಟಾಗಬೇಕಾಗಿದೆ ಎಂದು ಹೇಳಿದರು.

ಪಾಂಡೋಮಟ್ಟಿ ವಿರಕ್ತಮಠದ ಶ್ರೀ ಗುರು ಬಸವ ಸ್ವಾಮೀಜಿ ಮಾತನಾಡಿ, ದೇಶದ ಇತಿಹಾಸದಲ್ಲಿ ಕಾಶ್ಮೀರಕ್ಕೆ ವಿಶೇಷ ಸ್ಥಾನವಿದೆ. ಅದನ್ನು ಉಳಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ ಎಂದು ಹೇಳಿದರು.

ನಂಜನಗೂಡಿನ 400 ಜನ ಜಂಗಮರ ಹತ್ಯೆ ಪ್ರಕರಣವನ್ನು ನಾಡಿನ ಜನತೆಗೆ ಚಿತ್ರದ ಮೂಲಕ ತಿಳಿಯಪಡಿಸುವ ಅಗತ್ಯವಿದೆ. ಬೆಂಕಿ ಹಚ್ಚುವ ಕೆಲಸಕ್ಕಿಂತ ಜ್ಯೋತಿ ಬೆಳಗುವ ಕೆಲಸಗಳಾಗಬೇಕಿದೆ ಎಂದರು.

ಈ ಸಂದರ್ಭದಲ್ಲಿ ಇಸ್ಕಾನ್ ದಾವಣಗೆರೆ ಶಾಖೆಯ ಅವಧೂತ ಚಂದ್ರದಾಸ ಪ್ರಭುಜೀ, ಚನ್ನಗಿರಿಯ ಶ್ರೀ ಕೇದಾರೇಶ್ವರ ಸ್ವಾಮೀಜಿ, ರಾಂಪುರ ಹಾಲಸ್ವಾಮಿ ಮಠದ ಶ್ರೀ ಶಿವಕುಮಾರ ಸ್ವಾಮೀಜಿ, ನಂದಿಗಾವಿ ಹಾಲಸ್ವಾಮಿ ಮಠದ ಶ್ರೀಗಳು, ಕೂಡ್ಲಿಗಿ ಹಿರೇಮಠದ ಶ್ರೀ ನಿರಂಜನ ದೇವರು ಉಪಸ್ಥಿತರಿದ್ದರು.

ಹಿಂದೂ ಕಾರ್ಯಕರ್ತರಾದ ಶ್ರೀಕಾಂತ ಉದ್ದಾರ್, ಉಚ್ಚಂಗಿದುರ್ಗದ ಬಸವರಾಜ್, ಯೋಗೀಶ್ ಹೊಸಕೆರೆ, ಹೆಚ್.ಪಿ. ವಿಶ್ವಾಸ್, ಗುರುಬಸವರಾಜ್, ರವಿಕಿರಣ, ವಿರೂಪಾಕ್ಷ ಬಣಕಾರ, ಸಾಯಿ ದೀಪ, ವಿನಾಯಕ ರಾನಡೆ, ಚಂದನ್ ಮತ್ತಿತರರಿದ್ದರು.

## ನಗರದಲ್ಲಿ ಇಂದು ಕೇಕ್ ವರ್ಲ್ಡ್ ಬೇಕರಿ ಅಂಡ್ ಸ್ವೀಟ್ಸ್ ಲಕ್ಕಿ ಡ್ರಾ

ಅಂಬೇಡ್ಕರ್ ವೃತ್ತದ ಬಳಿ ಇರುವ ಕೇಕ್ ವರ್ಲ್ಡ್ ಬೇಕರಿ ಅಂಡ್ ಸ್ವೀಟ್ಸ್ ಮೆಗಾ ಲಕ್ಕಿ ಡ್ರಾ ಸಮಾರಂಭ ಇಂದು ಸಂಜೆ 7 ಗಂಟೆಗೆ ನಡೆಯಲಿದೆ.


ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಮೇಯರ್ ಆರ್. ಜಯಮ್ಮ ಗೋಪಿನಾಯ್ಕ, ಪಾಲಿಕೆ ಸದಸ್ಯ ಅಬ್ದುಲ್ ಲತೀಫ್, ಶಿವಾಲಿ ಚಿತ್ರಮಂದಿರದ ಮಾಲೀಕರಾದ ಶಿವಕುಮಾರ್, ಕೆಟಿಜೆ ನಗರ ಪಿಎಸ್ಐ ಪ್ರಭು ಕೆಳಗಿನಮನಿ, ಕೇಕ್ ವರ್ಲ್ಡ್ ಗ್ರೂಪ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಕೆ.ಪಿ. ಪ್ರಶಾಂತ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

## ಹನಗವಾಡಿಯಲ್ಲಿ ಇಂದು ವೀರಭದ್ರೇಶ್ವರ ಸ್ವಾಮಿ ತೇರು

ಹರಿಹರ ತಾಲ್ಲೂಕಿನ ಹನಗವಾಡಿ ಗ್ರಾಮದ ಶ್ರೀ ವೀರಭದ್ರೇಶ್ವರ ಸ್ವಾಮಿಯ ರಥೋತ್ಸವ ಇಂದು ಸಂಜೆ 6 ಗಂಟೆಗೆ ಜರುಗುವುದು.

ನಾಳೆ ಬುಧವಾರ ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 12.30 ರವರೆಗೆ ಸ್ವಾಮಿಯ ಗುಗ್ಗಳ ಶ್ರೀ ವೀರಭದ್ರೇಶ್ವರ ವೀರಗಾಸೆ ತಂಡದವರಿಂದ ಪುರವಂತರರು, ಸಮಾಳದವರು ಹಾಗೂ ಮೇಳಗಳೊನ್ನೊಳಗೂಡಿ ಊರಿನ ಪ್ರಮುಖ ಬೀದಿಗಳಲ್ಲಿ ಶ್ರೀ ವೀರಭದ್ರೇಶ್ವರ ಸ್ವಾಮಿ ರಥೋತ್ಸವವು ಸಾಗುವುದು.

## ಸಾವಿರ ತಿಂಗಳದ ಸತ್ಪುರುಷ, ಮೌನ ತಪಸ್ವಿ ಶಾಂತಲಿಂಗ ಶ್ರೀಗಳ ಹುಟ್ಟುಹಬ್ಬ



ಗದಗ, ಮಾ.21- ಸಾವಿರ ತಿಂಗಳದ ಸತ್ಪುರುಷ, ಮೌನತಪಸ್ವಿ ಶ್ರೀ ಜಡೆಯ ಶಾಂತಲಿಂಗ ಮಹಾಸ್ವಾಮೀಜಿಯವರ ಹುಟ್ಟುಹಬ್ಬ ಕಾರ್ಯಕ್ರಮವು ನಾಡಿದ್ದು ದಿನಾಂಕ 23ರ ಬುಧವಾರ ಸಂಜೆ 5 ಗಂಟೆಗೆ ಗದಗ ನಗರದ ತೋಟೇಶ್ ವಿ.ಮಾನ್ವಿ ಅವರ ನಿವಾಸದಲ್ಲಿ ನಡೆಯಲಿದೆ.

ಕೊಪ್ಪಳ ಗವಿಮಠ ಜಗದ್ಗುರು ಶ್ರೀ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮೀಜಿ ಅಧ್ಯಕ್ಷತೆ ಮತ್ತು ಬಾಳೆಹೊಸೂರಿನ ಶ್ರೀ ದಿಂಗಾಲೇಶ್ವರ ಮಹಾಸ್ವಾಮೀಜಿ ನೇತೃತ್ವದಲ್ಲಿ ಈ ಕಾರ್ಯಕ್ರಮ ಏರ್ಪಾಡಾಗಿದೆ.

ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಮಾಜಿ ಸಚಿವರುಗಳಾದ ಹೆಚ್.ಕೆ.ಪಾಟೀಲ್, ಅಲಂ ವೀರಭದ್ರಪ್ಪ ಮತ್ತಿತರರು ಮುಖ್ಯ ಅತಿಥಿಗಳಾಗಿದ್ದಾರೆ.

# ಸ್ಮಾರ್ಟ್ ಸಿಟಿಗೊಂದು ಸ್ಮಾರ್ಟ್ ದ್ವಿಚಕ್ರ ವಾಹನ



ದಾವಣಗೆರೆ, ಮಾ.21- ನಗರದ ಶ್ರೀ ಶಂಕರ ವಿಹಾರ ಬಡಾವಣೆಯ ಶ್ರೀ ಮಲ್ಲಿಕಾರ್ಜುನ ಮೋಟಾರ್ ಅಂಡ್ ಸ್ಕೂಟರ್ ಮಾರ್ಟ್‌ನಲ್ಲಿ ಸೋಮವಾರ ನೂತನ ಕೈನೆಟಿಕ್ ಗ್ರೀನ್ ಎಲೆಕ್ಟ್ರಿಕ್ ಸ್ಕೂಟರ್ ಷೋರೂಂ ಉದ್ಘಾಟಿಸಲಾಯಿತು.

ಅತಿಥಿ ಗಣ್ಯರು ದೀಪ ಬೆಳಗಿಸುವ ಮೂಲಕ ನೂತನ ಷೋ ರೂಂ ಉದ್ಘಾಟಿಸಿದರಲ್ಲದೇ, 18 ಗ್ರಾಹಕರಿಗೆ ಕೈನೆಟಿಕ್ ಗ್ರೀನ್ ದ್ವಿಚಕ್ರ ವಾಹನಗಳನ್ನು ವಿತರಿಸಿದರು.

ಎಸ್‌ಬಿಐ ಆರ್‌ಬಿಓ 3 ರೀಜನಲ್ ಮ್ಯಾನೇಜರ್ ರತನ್ ಕುಮಾರ್ ರತ್ನ ಮಾತನಾಡಿ, ಇಂಧನ ಬೆಲೆ ದುಬಾರಿಯಾಗಿರುವ ಪ್ರಸ್ತುತ ದಿನಮಾನಗಳಲ್ಲಿ ನಾಗರಿಕರಿಗೆ ಪರಿಸರಕ್ಕೆ ಪೂರಕವಾದ ಎಲೆಕ್ಟ್ರಿಕ್ ಸ್ಕೂಟರ್ ಅತ್ಯವಶ್ಯಕವಾಗಿದ್ದು, ಇದು ಹಣದ ಉಳಿತಾಯದ ಜೊತೆಗೆ ಸಮಾಜಕ್ಕೆ ಉಪಯೋಗಕಾರಿಯಾಗಿದೆ ಎಂದು ತಿಳಿಸಿದರು.

ಶ್ರೀ ಸಿದ್ದಗಂಗಾ ವಿದ್ಯಾಸಂಸ್ಥೆಯ ನಿರ್ದೇಶಕ ಡಾ. ಜಯಂತ್ ಮಾತನಾಡಿ, ಹಿಂದಿನ ದಿನಗಳಲ್ಲಿ ಕೈನೆಟಿಕ್ ಲೂನ ಮಹಿಳೆಯರ ಒಂದು ಪ್ರೆಸ್ಟೀಜ್ ಆಗಿತ್ತು. ಇದೀಗ ನೈಸರ್ಗಿಕ ಸಂಪನ್ಮೂಲಗಳ ಕೊರತೆಯನ್ನು ಮನಗಂಡು ಕೈನೆಟಿಕ್ ಕಂಪನಿಯು ಎಲೆಕ್ಟ್ರಿಕ್ ಸ್ಕೂಟರ್ ಆವಿಷ್ಕರಿಸಿದ್ದು, ಕೆಲವೇ ವರ್ಷಗಳಲ್ಲಿ ಎಲ್ಲ ಕಡೆಗಳಲ್ಲಿ ಇವುಗಳ ಸಂಚಾರ ಕಾಣಬಹುದಾಗಿದೆ. ಪರಿಸರ ಪೂರಕವಾದ ಈ ವಾಹನಗಳು ಸ್ಮಾರ್ಟ್‌ಸಿಟಿಗೆ ಉಪಯುಕ್ತವಾಗಿವೆ ಎಂದರು.

ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಜಯಂತ್ ಪೂಜಾರ್ ಮಾತನಾಡಿದರು.

ಮಲ್ಲಿಕಾರ್ಜುನ ಸಮೂಹ ಸಂಸ್ಥೆಗಳ ಅಧ್ಯಕ್ಷ ಎನ್.ಜೆ.ಗುರುಸಿದ್ದಯ್ಯ ಅಧ್ಯಕ್ಷತೆ ವಹಿಸಿ ಮಾತನಾಡಿ, ನಗರದಲ್ಲಿ ಸುಮಾರು 40 ವರ್ಷಗಳಿಂದ ಕೈನೆಟಿಕ್ ಕಂಪನಿಯನ್ನು ನಂಬಿ ವಾಹನಗಳ ಷೋ ರೂಂ ನಡೆಸಿಕೊಂಡು ಬಂದಿದ್ದೇನೆ. ಕೈನೆಟಿಕ್ ಕಂಪನಿಯು ನೂತನ ಗ್ರೀನ್ ಎಲೆಕ್ಟ್ರಿಕ್ ವಾಹನಗಳನ್ನು ತಯಾರಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದು ಗ್ರಾಹಕರ ಅಭಿರುಚಿಗೆ ತಕ್ಕಂತೆ ಹೊಸ ಹೊಸ ಮಾಡೆಲ್‌ಗಳನ್ನು ಗ್ರಾಹಕರಿಗೆ ಪರಿಚಯಿಸಲಾಗುವುದು ಎಂದು ತಿಳಿಸಿದರು.

## ಮೇಕೆದಾಟು ವಿರುದ್ಧ ತ.ನಾಡು ನಿರ್ಣಯ

ಚೆನ್ನೈ, ಮಾ. 21 – ಮೇಕೆದಾಟು ಸಮಾನಾಂತರ ಅಣೆಕಟ್ಟೆ ಕುರಿತು ರಾಜ್ಯ ಸರ್ಕಾರ ಏಕಪಕ್ಷೀಯ ತೀರ್ಮಾನ ತೆಗೆದುಕೊಳ್ಳುತ್ತಿದೆ ಎಂದು ಆಕ್ಷೇಪಿಸಿ ತಮಿಳುನಾಡು ವಿಧಾನಸಭೆ ಸರ್ವಸಮ್ಮತಿಯ ಖಂಡನಾ ನಿರ್ಣಯ ಅಂಗೀಕರಿಸಿದೆ. ರಾಜ್ಯ ಜಲ ಸಂಪನ್ಮೂಲ ಸಚಿವ ದೊರೈಮುರುಗನ್ ಅವರು ನಿಲುವಳಿ ಮಂಡಿಸಿದರು. ಈ ಅಣೆಕಟ್ಟೆಯ ಮೂಲಕ ಸುಪ್ರೀಂ ಕೋರ್ಟ್ ತೀರ್ಪು ಉಲ್ಲಂಘಿಸಲಾಗುತ್ತಿದೆ ಎಂದವರು ಆರೋಪಿಸಿದ್ದಾರೆ. ಎಐಎಡಿಎಂಕೆ ಹಾಗೂ ಬಿಜೆಪಿ ಸೇರಿದಂತೆ ಎಲ್ಲಾ ಪಕ್ಷಗಳು ನಿಲುವಳಿಗೆ ಸರ್ವಸಮ್ಮತಿಯ ಬೆಂಬಲ ನೀಡಿದವು.

## ಹರಿಹರ: ಮದ್ಯ ಮಾರಾಟ ನಿಷೇಧ

ದಾವಣಗೆರೆ ಮಾ.21- ಗ್ರಾಮ ದೇವತೆ ಊರಮ್ಮ ದೇವಿ ಜಾತ್ರೆ ಹಿನ್ನೆಲೆಯಲ್ಲಿ ದಿನಾಂಕ 22ರ ನಾಡಿದ್ದು ದಿನಾಂಕ 23 ರ ಮಧ್ಯರಾತ್ರಿವರೆಗೆ ದೇವಸ್ಥಾನದ ಸುತ್ತಮುತ್ತ ಮದ್ಯ ಮಾರಾಟ ಮತ್ತು ಮದ್ಯ ಸರಬರಾಜನ್ನು ನಿಷೇಧಿಸಿ, ಡಿಸಿ ಆದೇಶಿಸಿದ್ದಾರೆ.

# ಆಯುರ್ವೇದ ವೈದ್ಯರು ನಿಜವಾದ ವಾರಿಯರ್ಸ್

ದಾವಣಗೆರೆ, ಮಾ. 21- ಆಯುರ್ವೇದ ವೈದ್ಯರು ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಕೋವಿಡ್ ಮಹಾಮಾರಿಯಿಂದ ಲಕ್ಷಾಂತರ ಜನರ ಜೀವ ಉಳಿಸಿದ್ದಾರೆ. ಆಯುರ್ವೇದ ವೈದ್ಯರು ನಿಜವಾದ ಕೊರೊನಾ ವಾರಿಯರ್ಸ್ ಎಂದು ಆಯುರ್ವೇದ ಆಚಾರ್ಯ ಡಾ. ಶಂಕರಗೌಡ ಹೇಳಿದರು.

ಹರಿಹರ ರಸ್ತೆ ಕರೂರಿನ ಬಳಿಯ ಖಾಸಗಿ ಹೋಟೆಲ್‌ನಲ್ಲಿ ಹಮ್ಮಿಕೊಂಡಿದ್ದ ಆಯುರ್ವೇದ ವೈದ್ಯರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಕೊರೊನಾ ವಿರುದ್ಧದ ಸಮರದಲ್ಲಿ ಗೆಲುವು ಸಾಧಿಸುವಲ್ಲಿ ಆಯುರ್ವೇದ ವೈದ್ಯರು ಪ್ರಮುಖ ಪಾತ್ರ ವಹಿಸಿದ್ದಾರೆ. ಆ ಸಂದರ್ಭದಲ್ಲಿ ಪ್ರತಿ ಮನೆಯಲ್ಲೂ ಆಯುರ್ವೇದ ಪದ್ಧತಿ ಯನ್ನು ಅನುಸರಿಸಲಾಗಿತ್ತು ಎಂದು ತಿಳಿಸಿದರು.

ಭಾರತೀಯ ಆಯುರ್ವೇದ ವೈದ್ಯರನ್ನು ಗೌರವಿಸುವ ಮೂಲಕ ವೈದ್ಯರ ನೈತಿಕ ಸ್ಥೈರ್ಯವನ್ನು ಹೆಚ್ಚಿಸುವ ಕೆಲಸವನ್ನು ಮಾಡಲಾಗಿದೆ ಎಂದು ಹೇಳಿದರು.

ಆಯುರ್ವೇದಾಚಾರ್ಯ ಡಾ.ಜ್ಞಾನೇಶ್ವರ ಮಾತನಾಡಿ, ರಾಜಸ್ಥಾನದ ಡಿಸ್ಪೆನ್ಸರಿ ಮುಂಬೈ ಆಯುರ್ವೇದ ವೈದ್ಯರಿಗೆ ಸನ್ಮಾನ ಮಾಡುವ ಮೂಲಕ ಹೊಸ ಚೈತನ್ಯವನ್ನು ನೀಡಿದೆ ಎಂದರು.

ಆಯುರ್ವೇದಾಚಾರ್ಯ ಡಾ. ಉಮೇಶ್ ಹಿರೇಮಠ ಮಾತನಾಡಿ, ಕೋವಿಡ್-19 ರ ಸಂದರ್ಭದಲ್ಲಿ ಆಯುರ್ವೇದ ವೈದ್ಯರು ನಿಸ್ವಾರ್ಥ ಸೇವೆ ಸಲ್ಲಿಸುವ ಮೂಲಕ ರೋಗಿಗಳ



ಜೀವ ಉಳಿಸಿದ್ದಾರೆ. ಇದು ಶಾಶ್ವತವಾಗಿ ನೆನಪಿನಲ್ಲಿ ಉಳಿಯುತ್ತದೆ ಎಂದು ತಿಳಿಸಿದರು.

ಡಾ. ಮಂಜುನಾಥ್, ಮಲ್ಲಿಕಾರ್ಜುನ್ ಹಳ್ಳೂರು, ಗುರುರಾಜ ಶಾಸ್ತ್ರಿ, ಡಾ. ದರ್ಶನ್ ಬಾಬು ಮಾತನಾಡಿ, ಕೊರೊನಾ ಸಂದರ್ಭದಲ್ಲಿ ಆಯುರ್ವೇದ ಔಷಧಿಗಳು ಪರಿಣಾಮಕಾರಿ ಎಂಬುದನ್ನು ಸಾಬೀತು ಪಡಿಸಿವೆ ಎಂದು ಹೇಳಿದರು.

ಜಿಲ್ಲೆಯ ಎಲ್ಲಾ ವೈದ್ಯರಿಗೆ ರಾಜಸ್ಥಾನ ಡಿಸ್ಪೆನ್ಸರಿ ಮುಂಬೈ (ಆರ್‌ಎಪಿಎಲ್ ಗ್ರೂಪ್) ಕುಟುಂಬದ ಪರವಾಗಿ ಹಾರ, ಶಾಲು, ಸಫಾ ಚಿಹ್ನೆಗಳನ್ನು ನೀಡಿ ಗೌರವಿಸಲಾಯಿತು.

ಇದೇ ವೇಳೆ ಆರ್‌ಎಪಿಎಲ್ ಸಮೂಹದ ಅಧ್ಯಕ್ಷ ಡಾ. ಎಸ್.ಡಿ. ಚೌಪ್ದಾರ್ ಅವರಿಗೆ ಎರಡು ನಿಮಿಷಗಳ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕಾರ್ಯಕ್ರಮ ಪ್ರಭಾರಿ ಜಾಹಿದ್ ಅಹಮದ್, ಕರೀಂಖಾನ್, ಸೈಯದ್ ಯೂಸೂಫ್, ಸಂಯೋಜಕಿ ಶ್ರುತಿ ಶೆಟ್ಟಿ ಮತ್ತು ಇತರರು ಉಪಸ್ಥಿತರಿದ್ದರು.

## 18 ವರ್ಷದ ಎಲ್ಲರಿಗೂ ಬೂಸ್ಟರ್: ಪರಿಶೀಲನೆ

ನವದೆಹಲಿ, ಮಾ. 21 – ಕೊರೊನಾ ಸೋಂಕು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ 18 ವರ್ಷ ಮೀರಿದ ಎಲ್ಲರಿಗೂ ಬೂಸ್ಟರ್ ಡೋಸ್ ನೀಡಲು ಕೇಂದ್ರ ಸರ್ಕಾರ ಪರಿಶೀಲಿಸುತ್ತಿದೆ.

ಪ್ರಸಕ್ತ ಮುಂಚೂಣಿ ಕಾರ್ಯಕರ್ತರು ಹಾಗೂ 60 ವರ್ಷ ಮೀರಿದವರಿಗೆ ಮಾತ್ರ ಮುನ್ನೆಚ್ಚರಿಕೆ ಡೋಸ್ ನೀಡ ಲಾಗುತ್ತಿದೆ. ಎರಡನೇ ಡೋಸ್ ಪಡೆದು 39 ವಾರ ಕಳೆದಿರುವವರು ಬೂಸ್ಟರ್ ಡೋಸ್ ಪಡೆಯಲು ಸರ್ಕಾರ ಇದುವ ರೆಗೂ ಅನುಮತಿ ನೀಡಿದೆ.

# ಮಳಲ್ಕೆರೆ : ಡಾ.ಸೋಮಶೇಖರಪ್ಪ ಅವರಿಗೆ ಸನ್ಮಾನ



ದಾವಣಗೆರೆ, ಮಾ.21- ತಾಲ್ಲೂಕಿನ ಮಳಲ್ಕೆರೆ ಗ್ರಾಮದ ಶ್ರೀ ಮಲ್ಲೇಶ್ವರ ನೀರು ಬಳಕೆದಾರರ ಸಹಕಾರ ಸಂಘದ ಹಿರಿಯ ಸದಸ್ಯರುಗಳಾದ ಡಾ|| ಸೋಮಶೇಖರಪ್ಪ ಕೂಲಂಬಿ, ಅವರು ಸಂಘದ ಅಭಿವೃದ್ದಿಗೆ ಸಹಕಾರ, ಪ್ರೋತ್ಸಾಹ, ಮಾರ್ಗದರ್ಶನ ನೀಡುತ್ತಿದ್ದು, ಅವರನ್ನು ಅಮೂಲ್ಯ ರತ್ನಗಳನ್ನು ಗುರುತಿಸಿ ಸಂಘದ ಆಡಳಿತ ಮಂಡಳಿಯಿಂದ ನಿನ್ನೆ ಸನ್ಮಾನಿಸಲಾಯಿತು ಎಂದು ಸಂಘದ ಅಧ್ಯಕ್ಷ ಜಿ. ಮುರಿಗೇಂದ್ರಪ್ಪ ಮಳಲಕೆರೆ ತಿಳಿಸಿದ್ದಾರೆ.

ಸಂಘದ ಅಧ್ಯಕ್ಷ ಜಿ. ಮುರಿಗೇಂದ್ರಪ್ಪ, ಉಪಾಧ್ಯಕ್ಷ ಎಂ.ಎಸ್. ನಾಗರಾಜ್, ಮುಖ್ಯಕಾರ್ಯನಿರ್ವಾಹಕ ಜಿ. ತಿಪ್ಪೇಸ್ವಾಮಿ, ನಿರ್ದೇಶಕರುಗಳಾದ ಎಸ್.ಎಸ್. ಸುರೇಶ್, ವೈ.ಜಿ. ಚಂದ್ರಶೇಖರಪ್ಪ, ಪಿ.ಡಿ. ಸೋಮಣ್ಣ, ನಾಗನಗೌಡ, ಜಿ.ಎಂ. ಗಿರೀಶ್, ಕೆ.ಸಿ. ಚಮನ್ ಸಾಬ್, ಶ್ರೀಮತಿ ಪಾರ್ವತಮ್ಮ, ಶ್ರೀಮತಿ ಜಿ. ಗಿರಿಜಮ್ಮ, ಬಿ. ಶ್ರೀನಿವಾಸ್ ಹಾಗು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಉಕ್ರೇನ್ ವೈದ್ಯ ವಿದ್ಯಾರ್ಥಿಗಳ ಕಲಿಕೆಗೆ ಅವಕಾಶ

**(3ನೇ ಪುಟದಿಂದ)** ಉಕ್ರೇನ್‌ನಿಂದ ಹಿಂದಿರುಗಿದ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವುದು, ಎನ್‌ಎಂಸಿ ಹಾಗೂ ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕಾದ ಬೇಡಿಕೆಗಳನ್ನು ಸಿದ್ಧಪಡಿಸುವ ಕೆಲಸವನ್ನು ಈ ಸಮಿತಿ ಮಾಡಲಿದೆ. ಈ ಬೇಡಿಕೆಗಳನ್ನು ಕೇಂದ್ರ ಸರ್ಕಾರ ಹಾಗೂ ಕೇಂದ್ರ ಆರೋಗ್ಯ ಸಚಿವರ ಮುಂದೆ ಇಡಲಾಗುವುದು. ಈಗಾಗಲೇ ಪ್ರಧಾನಿ ನರೇಂದ್ರ ಮೋದಿಯವರು ಈ ಕುರಿತು ಕ್ರಮ ವಹಿಸುತ್ತಿದ್ದಾರೆ ಎಂದರು.

ವಿದ್ಯಾರ್ಥಿಗಳು ಸುರಕ್ಷಿತವಾಗಿ ಹಿಂದಿಗಿರುವುದೇ ದೊಡ್ಡ ಭಾಗ್ಯ. ಪ್ರಧಾನಿ ನರೇಂದ್ರ ಮೋದಿಯವರು ಈ ವಿಚಾರದಲ್ಲಿ ಹೆಚ್ಚು ಆಸಕ್ತಿ ವಹಿಸಿದ್ದಾರೆ. ವಿದ್ಯಾರ್ಥಿಗಳ ಭವಿಷ್ಯವನ್ನು ಉಜ್ವಲ ವಾಗಿ ಬೆಳಗಬೇಕಿದೆ. ಎಲ್ಲರೂ ಉತ್ತಮ ಮನೋಸ್ಥೈರ್ಯದಿಂದ ಇರಬೇಕು. ವಿದ್ಯಾರ್ಥಿಗಳಿಗೂ ವಿದ್ಯಾಭ್ಯಾಸದ ಬಗ್ಗೆ ಚಿಂತೆ ಇತ್ತು. ಈಗ ಸರ್ಕಾರ ಮಾಡಿರುವ ತೀರ್ಮಾನಕ್ಕೆ ವಿದ್ಯಾರ್ಥಿಗಳು ಕೂಡ ಒಪ್ಪಿದ್ದಾರೆ. ವೈದ್ಯಕೀಯ ಶಿಕ್ಷಣದಲ್ಲಿ ಮಾರ್ಪಾಡು ತರುವ ಬಗ್ಗೆ ವಿದ್ಯಾರ್ಥಿಗಳು ಸಲಹೆ ನೀಡಿದ್ದಾರೆ. ಈ ಬಗ್ಗೆಯೂ ಸಮಿತಿಯಲ್ಲಿ ಚರ್ಚೆ ಮಾಡಲಾಗುತ್ತದೆ ಎಂದರು.



